ದಿನಾಂಕ 28–1–2019 ರಂದು ಮಧ್ಯಾಹ್ನ 1.30 ಗಂಟೆಗೆ ಕುಲಪತಿಯವರ ಸಭಾಂಗಣ, ಕೃವಿವಿ, ರಾಯಚೂರಿನಲ್ಲಿ ಜರುಗಿದ ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 38ನೇ ಸಭೆಯ ನಡುವಳಿಗಳು:

ಉಪಸ್ಥಿತರು:

| | | |
|---|---|---|
| 1. | ಡಾ. ಕೆ.ಎನ್. ಕಟ್ಟಿಮನಿ, ಮಾನ್ಯ ಕುಲಪತಿಗಳು, ಕೃವಿವಿ., ರಾಯಚೂರು | ಅಧ್ಯಕ್ಷರು |
| 2. | ಶ್ರೀ ಬಿ. ನಾಗಭೂಷಣ, ಸರ್ಕಾರದ ಉಪ–ಕಾರ್ಯದರ್ಶಿಗಳು, ಕೃಷಿ ಇಲಾಖೆ, (ಸರ್ಕಾರದ ಕಾರ್ಯದರ್ಶಿಗಳು, ಕೃಷಿ ಇಲಾಖೆ ಇವರ ಪರವಾಗಿ) | ಸದಸ್ಯರು |
| 3. | ಡಾ. ಎಂ. ಶೇಖರಗೌಡ, ಹೇರೂರು, ಗಂಗಾವತಿ, ಕೊಪ್ಪಳ ಜಿಲ್ಲೆ | ಸದಸ್ಯರು |
| 4. | ಶ್ರೀಮತಿ ಹೇಮಾವತಿ ಲಂಕೇಶ, ಗಂಗಾವತಿ ಕೊಪ್ಪಳ ಜಿಲ್ಲೆ | ಸದಸ್ಯರು |
| 5. | ಶ್ರೀ ಅಮರೇಶ ಬಲ್ಲಿದವ, ದೇವದುರ್ಗ, ರಾಯಚೂರು ಜಿಲ್ಲೆ | ಸದಸ್ಯರು |
| 6. | ಶ್ರೀ ಸಿದ್ದಪ್ಪ ಭಂಡಾರಿ, ಕಲಮಲ, ರಾಯಚೂರು ಜಿಲ್ಲೆ | ಸದಸ್ಯರು |
| 7. | ಶ್ರೀ ವೀರನಗೌಡ ಪರಸರೆಡ್ಡಿ, ನಾಲವಾರ, ಚಿತ್ತಾಪುರ, ಕಲಬುರಗಿ ಜಿಲ್ಲೆ | ಸದಸ್ಯರು |
| 8. | ಡಾ. ಎಂ.ಜಿ. ಪಾಟೀಲ್, ಕುಲಸಚಿವರು, ಕೃವಿವಿ., ರಾಯಚೂರು | ಸದಸ್ಯ–ಕಾರ್ಯದರ್ಶಿ |

ಪ್ರಾರಂಭದಲ್ಲಿ, ನೂತನವಾಗಿ ನೇಮಕಗೊಂಡ ಮಾನ್ಯ ಕುಲಪತಿಗಳಾದ ಡಾ. ಕೆ.ಎನ್. ಕಟ್ಟಿಮನಿ ಅವರು ರಾಯಚೂರು ಕೃಷಿ ವಿಶ್ವವಿದ್ಯಾಲಯದ ವ್ಯವಸ್ಥಾಪನಾ ಮಂಡಳಿಯ ಸಭೆಯ ಅಧ್ಯಕ್ಷತೆ ವಹಿಸಿ, ಹಾಜರಿದ್ದ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಹೂ–ಗುಚ್ಚ ನೀಡುವುದರೊಂದಿಗೆ ಸ್ವಾಗತ ಕೋರಿ, ಕುಲಸಚಿವರಾಗಿ ಕರ್ತವ್ಯ ವಹಿಸಿಕೊಂಡ ಡಾ. ಎಂ.ಜಿ. ಪಾಟೀಲ್ ಅವರನ್ನು ಪರಿಚಯಿಸಿದರು.

ಮಾನ್ಯ ಕುಲಪತಿಯವರು ವಿಶ್ವವಿದ್ಯಾಲಯದ ಚಟುವಟಿಕಗಳ ಕುರಿತು ಪರಿಚಯಿಸುತ್ತಾ, ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗಾಗಿ ಮಾನ್ಯ ಸದಸ್ಯರ ಸಹಕಾರ ಕೋರಿ, ಕೊರಂ ಇದ್ದ ಪ್ರಯುಕ್ತ ಕುಲಸಚಿವರು ಹಾಗೂ ವ್ಯವಸ್ಥಾಪನಾ ಮಂಡಳಿಯ ಸದಸ್ಯ–ಕಾರ್ಯದರ್ಶಿ ಇವರಿಗೆ ಕಾರ್ಯಸೂಚಿ ಪ್ರಕಾರ ಮಂಡಳಿಯ ಸಭೆಯನ್ನು ಪ್ರಾರಂಭಿಸಲು ಸೂಚಿಸಿದರು. ನಂತರ, ಸಭೆಯಲ್ಲಿ ಈ ಕೆಳಗಿನಂತೆ ಕಾರ್ಯಸೂಚಿ ಮೇರೆಗೆ ವಿಷಯಗಳನ್ನು ಚರ್ಚಿಸಿ, ಠರಾಯಿಸಲಾಯಿತು:

| | |
|---|---|
| ಐಟಂ–1 | ಮಾನ್ಯ ವ್ಯವಸ್ಥಾಪನಾ ಮಂಡಳಿಯ 35ನೇ ಸಭೆಯ ಹಾಗೂ 36ನೇ ಮತ್ತು 37ನೇ (ವಿಶೇಷ) ಸಭೆಗಳ ನಡುವಳಿಗಳನ್ನು ಸ್ಥಿರೀಕರಿಸುವುದು.<br><br>ಠರಾವು:<br>ದಿನಾಂಕ 7–7–2018 ಹಾಗೂ 28–7–2018, 6–10–2018 ರಂದು ಕ್ರಮವಾಗಿ ಜರುಗಿದ ರಾಯಚೂರು ಕೃವಿವಿ.,ಯ ಮಾನ್ಯ ವ್ಯವಸ್ಥಾಪನಾ ಮಂಡಳಿಯ 35ನೇ ಸಭೆಯ ಹಾಗೂ 36ನೇ ಮತ್ತು 37ನೇ (ವಿಶೇಷ) ಸಭೆಗಳ ನಡುವಳಿಗಳನ್ನು ಸ್ಥಿರೀಕರಿಸಲಾಯಿತು. |
| ಐಟಂ–2 | ಮಾನ್ಯ ವ್ಯವಸ್ಥಾಪನಾ ಮಂಡಳಿಯ 35ನೇ ಸಭೆಯ ಹಾಗೂ 36ನೇ ಮತ್ತು 37ನೇ (ವಿಶೇಷ) ಸಭೆಗಳ ನಡುವಳಿಗಳ ಮೇಲೆ ಕೈಗೊಂಡ ಅನುಪಾಲನಾ ಕ್ರಮಗಳಿಗೆ ಅನುಮೋದನೆ ನೀಡುವುದು.<br><br>1) ದಿನಾಂಕ 7–7–2018 ರಂದು ನಡೆದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 35ನೇ ಸಭೆಯ ನಡುವಳಿಗಳ ಮೇಲಿನ ಅನುಪಾಲನಾ ಕ್ರಮಗಳ ಅನುಮೋದನೆ.<br>ಐಟಂ ಸಂಖ್ಯೆ : 12 : ಎಸ್.ಸಿ.ಎಸ್.ಪಿ. / ಟಿ.ಎಸ್.ಪಿ. ಯೋಜನೆಗಳಡಿ ಖರ್ಚಾಗದೇ ಉಳಿದಿರುವ ರೂ. 90,43,492/– ಮೊತ್ತವನ್ನು ಬಳಕೆ ಮಾಡುವ ಕುರಿತು.<br><br>ಠರಾವು:<br>ದೀರ್ಘ ಚರ್ಚೆಯ ನಂತರ, ಸಂ. ಕುಸ/ಕೃವಿವಿರಾ/ವ್ಯ.ಮಂ.ಸಭೆ–35/4419/2018–'19 ದಿನಾಂಕ 10–8–2018 ರನ್ವಯ ಹೊರಡಿಸಲಾದ ಆದೇಶವನ್ನು ಹಿಂಪಡೆಯುತ್ತಾ, ಪ.ಜಾ / ಪ.ಪಂ. ವಿದ್ಯಾರ್ಥಿಗಳ ಹಾಸ್ಟಲ್ ಇ.ಬಿ.ಎಲ್. ವೆಚ್ಚವನ್ನು ಎಸ್.ಸಿ.ಎಸ್.ಪಿ. ಮತ್ತು ಟಿ.ಎಸ್.ಪಿ. ಯೋಜನೆಯ ಅನುದಾನದಲ್ಲಿ ಭರಿಸಲು |

| | |
|---|---|
| | ಹಾಗೂ ಇದನ್ನು ಮುಂದಿನ ಆದೇಶದವರೆಗೆ ಮುಂದುವರೆಸಲು ಕೃವಿವಿ ಆದೇಶ ಸಂ. ಕುಸ/ಕೃವಿವಿರಾ/ಎಸ್.ಸಿ.–ಟಿ.ಎಸ್.ಪಿ/2018–'19 ದಿನಾಂಕ 2–1–2019 ಅನ್ನು ಹೊರಡಿಸಿ ಕೈಗೊಂಡ ಕ್ರಮಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಸಮರ್ಥನೆ ನೀಡಿತು.<br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿ / ನೋಡಲ್ ಅಧಿಕಾರಿ – ಎಸ್.ಸಿ.ಎಸ್.ಪಿ / ಟಿ.ಎಸ್.ಪಿ.)<br><br>**ಐಟಂ ಸಂಖ್ಯೆ : 13 : ಕೃಷಿ ವಿಶ್ವವಿದ್ಯಾಲಯ ರಾಯಚೂರು ಆವರಣದಲ್ಲಿ ಹಾಗೂ ಕೃಷಿ ವಿಜ್ಞಾನ ಕೇಂದ್ರ ಬೀದರನಲ್ಲಿ ಸಮುದಾಯ ಬಾನುಲಿ ಕೇಂದ್ರಗಳ ಸ್ಥಾಪನೆಗೆ ಅನುಮೋದನೆ ನೀಡುವ ಕುರಿತು.**<br>**ಠರಾವು:**<br>ಚರ್ಚೆಯ ನಂತರ, ರಾಯಚೂರು ಕೃಷಿ ವಿಶ್ವವಿದ್ಯಾಲಯದ ಮುಖ್ಯ ಆವರಣದಲ್ಲಿ ಹಾಗೂ ಕೃಷಿ ವಿಜ್ಞಾನ ಕೇಂದ್ರ, ಬೀದರ್ ಮತ್ತು ಕವಡಿಮಟ್ಟಿಯಲ್ಲಿ ತಲಾ ಒಂದು ಸಮುದಾಯ ಬಾನುಲಿ ಕೇಂದ್ರವನ್ನು ಸ್ಥಾಪಿಸುವ ಸಾಧ್ಯತೆಗಳ ಕುರಿತು ಸಲಹೆ ನೀಡುವ ಸಲುವಾಗಿ ಒಂದು ಸಮಿತಿಯನ್ನು ರಚಿಸಿ, ಸದರಿ ಸಮಿತಿಯು ರಚನೆಗೊಂಡ ದಿನಾಂಕದಿಂದ ಒಂದು ತಿಂಗಳೊಳಗಾಗಿ ತನ್ನ ವರದಿಯನ್ನು ಮಂಡಳಿಗೆ ಸಲ್ಲಿಸುವಂತೆ ಠರಾಯಿಸಿತು.<br>(ಕ್ರಮ : ವಿಸ್ತರಣಾ ನಿರ್ದೇಶಕರು / ಕುಲಸಚಿವರು)<br><br>**2) ದಿನಾಂಕ 28–7–2018 ರಂದು ನಡೆದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 36ನೇ (ವಿಶೇಷ) ಸಭೆಯ ನಡುವಳಿಗಳ ಮೇಲಿನ ಅನುಪಾಲನಾ ಕ್ರಮಗಳ ಅನುಮೋದನೆ.**<br><br>**ಐಟಂ ಸಂಖ್ಯೆ 6 : ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯಲ್ಲಿಯ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರದ ಕಚೇರಿಯನ್ನು ಸಿಬ್ಬಂದಿ ಸಮೇತ ಯಾದಗಿರಿಗೆ ವರ್ಗಾಯಿಸುವ ಕುರಿತು.**<br><br>**ಠರಾವು :**<br>ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲಿಸಿದ ನಂತರ, ಸದರಿ ವಿಷಯವನ್ನು ಮುಂದಿನ ಸಭೆಯಲ್ಲಿ ಮಂಡಿಸಲು ತೀರ್ಮಾನಿಸಿ, ಮುಂದೂಡಲು ಠರಾಯಿಸಿತು.<br>(ಕ್ರಮ : ವಿಸ್ತರಣಾ ನಿರ್ದೇಶಕರು / ಕುಲಸಚಿವರು)<br><br>**3) ದಿನಾಂಕ 6–10–2018 ರಂದು ನಡೆದ ಮಾನ್ಯ ವ್ಯವಸ್ಥಾಪನಾ ಮಂಡಳಿಯ 37ನೇ (ವಿಶೇಷ) ಸಭೆಯ ನಡುವಳಿಗಳ ಮೇಲಿನ ಅನುಪಾಲನಾ ಕ್ರಮಗಳ ಅನುಮೋದನೆ.**<br><br>**ಐಟಂ ಸಂಖ್ಯೆ 1 : ಸಿ.ಎ.ಎಸ್. 2006ರಡಿ ಶಿಕ್ಷಕರ ಪದೋನ್ನತಿಯ ಪ್ರಕರಣಗಳನ್ನು ಪರಿಶೀಲಿಸಲು ರಚಿಸಲಾದ ಸಮಿತಿಯ ಶಿಫಾರಸ್ಸುಗಳನ್ನು ಪರಿಗಣಿಸುವ ಕುರಿತು.** |
| | **ಠರಾವು :**<br>ವಿಸ್ತೃತ ಚರ್ಚೆಯ ನಂತರ, ಸಿ.ಎ.ಎಸ್. 2006ರಡಿ ಬಾಕಿ ಇರುವ ಶಿಕ್ಷಕರ ಪದೋನ್ನತಿಯ ಪ್ರಕರಣಗಳನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ, ಇತರೇ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಪರಿಗಣಿಸಿರುವಂತೆ, ಸದರಿಯವರಿಗೆ ಪದೋನ್ನತಿಗಾಗಿ ಅರ್ಹವಾದ ದಿನಾಂಕದಂದೇ ಪದೋನ್ನತಿಗೊಳಿಸಲು ಎಲ್ಲಾ ಮಾನ್ಯ ನಾಮನಿರ್ದೇಶಿತ ಸದಸ್ಯರುಗಳು ಸಲಹೆ ನೀಡಿರುವ ಹಿನ್ನೆಲೆಯಲ್ಲಿ ಸದರಿ ವಿಷಯಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ಮುಂದುವರೆದು, ಸಿ.ಎ.ಎಸ್.–2006 ನಿಯಮಾವಳಿಗಳ ಖಂಡ 3.2.3 ರಲ್ಲಿಯ ಉಪಬಂಧಗಳನ್ವಯ ಸಿ.ಎ.ಎಸ್.–2006 ರ ಅಡಿ ಪದೋನ್ನತಿಗಾಗಿ ಇನ್ನು ಮುಂದಿನಿಂದ ವರ್ಷದಲ್ಲಿ ಎರಡು ಬಾರಿ ಅರ್ಜಿಗಳನ್ನು ಆಹ್ವಾನಿಸಲು ಅಧಿಸೂಚನೆಯನ್ನು ಹೊರಡಿಸಿ, ಖಂಡ 3.2.4. ರಲ್ಲಿಯ ಅವಕಾಶದನ್ವಯ ಪದೋನ್ನತಿಗಳನ್ನು ನೀಡಿ ಸಿ.ಎ.ಎಸ್.–2006 ನಿಯಮಾವಳಿಗಳನ್ನು ಅನುಷ್ಠಾನಗೊಳಿಸಲು ಠರಾಯಿಸಲಾಯಿತು.<br>(ಕ್ರಮ : ಕುಲಸಚಿವರು) |

| | |
|---|---|
| | ಐಟಂ ಸಂಖ್ಯೆ 2 : ಸಾಮಾನ್ಯ (ಗ್ರಾಮೀಣ) ಪ್ರವರ್ಗದಡಿ ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಯ ನೇಮಕಾತಿ ಸಂಬಂಧ ಆಯ್ಕೆ ಸಮಿತಿಯು ಮಾಡಿದ ಶಿಫಾರಸ್ಸನ್ನು ಪರಿಗಣಿಸುವ ಕುರಿತು.<br><br>ಸದರಿ ಹುದ್ದೆಗೆ ಮೂಲ ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕ, ಹೆಚ್ಚುವರಿ ದಾಖಲಾತಿಗಳನ್ನು ಸಲ್ಲಿಸಲು ನಿಗದಿಗೊಳಿಸಿದ ಕೊನೆಯ ದಿನಾಂಕ ಮತ್ತು ಶ್ರೀಮತಿ ಜಮುನಾ ಇವರು ಗ್ರಾಮೀಣ ಅಭ್ಯರ್ಥಿ ಪ್ರವರ್ಗದ ಕುರಿತು ಸಂಪೂರ್ಣ ಪ್ರಮಾಣಪತ್ರಗಳನ್ನು ಸಲ್ಲಿಸಿದ ದಿನಾಂಕದ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸಲು ಠರಾಯಿಸಿದಂತೆ, ಕುಲಸಚಿವರು ವಿವರಗಳನ್ನು ಮಂಡಿಸಿದರು.<br><br>ಮಾನ್ಯ ಸದಸ್ಯರಾದ ಶ್ರೀ ಅಮರೇಶ್ ಬಲ್ಲಿದವ ಇವರು ಶ್ರೀಮತಿ ಜಮುನಾ ಗ್ರಾಮೀಣ ಅಭ್ಯರ್ಥಿ ವ್ಯಾಸಂಗದ ಪ್ರಮಾಣಪತ್ರಗಳ ದಿನಾಂಕಗಳು ಅಧಿಸೂಚನೆ ಹೊರಡಿಸಿದ ದಿನಾಂಕಕ್ಕಿಂತ ಮುಂಚಿನವುಗಳಾಗಿರುತ್ತವೆ, ಆಯ್ಕೆ ಸಮಿತಿಯು ಶ್ರೀಮತಿ ಜಮುನಾರವನ್ನು ಸಾಮಾನ್ಯ (ಗ್ರಾಮೀಣ) ಅಭ್ಯರ್ಥಿ ಪ್ರವರ್ಗದಡಿ ಅರ್ಹಗೊಳಿಸಿ ಶಿಫಾರಸ್ಸು ಮಾಡಿರುತ್ತದೆ, ಶಿಫಾರಸ್ಸಿಸಿದ ಒಂದನೇ ಮತ್ತು ಎರಡನೇ ಕ್ರಮಾಂಕಗಳಲ್ಲಿರುವ ಅಭ್ಯರ್ಥಿಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನರ್ಹತೆಗೊಳಿಸಿರುತ್ತದೆ, ಆದುದರಿಂದ, ಸಾಮಾನ್ಯ (ಗ್ರಾಮೀಣ) ಪ್ರವರ್ಗದಡಿ ಶ್ರೀಮತಿ ಜಮುನಾರವರಿಗೆ ಸಹಾಯಕ ಪ್ರಾಧ್ಯಾಪಕರು (ಕೃಷಿ ಕೀಟಶಾಸ್ತ್ರ) ಹುದ್ದೆಯ ನೇಮಕಾತಿ ಆದೇಶವನ್ನು ನೀಡಬೇಕಾಗಿ ಆಗ್ರಹಿಸಿದರು.<br><br>ಶ್ರೀ ಬಸವರಾಜ ಕಾಡನ್ನವರ್ ಅವರು ಶ್ರೀಮತಿ ಜಮುನಾರವರ ವಿರುದ್ಧ ಸರಕಾರವು ರಚಿಸಿದ ಸಮಿತಿಗೆ ಮೇಲಿನ ವಿಷಯದ ಕುರಿತು ದೂರನ್ನು ಸಲ್ಲಿಸಿರುತ್ತಾರೆ.<br><br>ಸರಕಾರದ ಉಪ–ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರು ನೇಮಕಾತಿ ಸಂಬಂಧ ಸ್ವೀಕೃತವಾದ ದೂರುಗಳ ಕುರಿತು ಪರಿಶೀಲಿಸಲು ಡಾ. ಎಂ. ಎನ್. ಶೀಲವಂತರ್ ರವರ ಅಧ್ಯಕ್ಷತೆಯಲ್ಲಿ ಸರಕಾರವು ರಚಿಸಿದ ಸಮಿತಿಯು ದೂರುಗಳನ್ನು ಪರಿಶೀಲಿಸುತ್ತಿದ್ದು, ಸದರಿ ಸಮಿತಿಯ ವರದಿ ಬಂದ ನಂತರ ಮಂಡಳಿಯು ಸೂಕ್ತ ನಿರ್ಣಯ ಕೈಗೊಳ್ಳುವಂತೆ ಸಲಹೆ ನೀಡಿದರು.<br><br>ಠರಾವು :<br><br>ಮಂಡಳಿಯು, ಡಾ. ಎಂ. ಎನ್. ಶೀಲವಂತರ್ ರವರ ಸಮಿತಿಯ ವರದಿ ಸ್ವೀಕೃತವಾದ ನಂತರ, ಶ್ರೀಮತಿ ಜಮುನಾ ಇವರಿಗೆ ನೇಮಕಾತಿ ಆದೇಶ ನೀಡುವ ಕ್ರಮಕೈಗೊಳ್ಳಲು ಠರಾಯಿಸಿತು.<br>(ಕ್ರಮ : ಕುಲಸಚಿವರು)<br><br>ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು<br><br>**1) ಮಾನ್ಯ ವ್ಯವಸ್ಥಾಪನಾ ಮಂಡಳಿಯ ನಾಮನಿರ್ದೇಶಿತ ಸದಸ್ಯರುಗಳ ಉತ್ತರ ಭಾರತದ ಕೃಷಿ ಅಧ್ಯಯನ ಪ್ರವಾಸ ಕೈಗೊಳ್ಳುವ ಕುರಿತು.**<br><br>ಠರಾವು :<br>ಮಾನ್ಯ ನಾಮನಿರ್ದೇಶಿತ ಐವರು ಸದಸ್ಯರ ರೂ. 6.90 ಲಕ್ಷಗಳ ಪ್ರಸ್ತಾಪಿತ ಉತ್ತರ ಭಾರತದ ಕೃಷಿ ಅಧ್ಯಯನ ಪ್ರವಾಸದಲ್ಲಿ ಭೇಟಿ ನೀಡಲಿರುವ ಕೃಷಿ ವಿಶ್ವವಿದ್ಯಾಲಯಗಳು, ಕೃಷಿ ಮತ್ತು ಕೃಷಿ ಸಂಬಂಧಿತ ವಿವಿಧ ಕೇಂದ್ರಗಳ ಬಗ್ಗೆ, ಅಲ್ಲಿಯ ಆವಿಷ್ಕಾರಗಳ ಬಗ್ಗೆ ವಿಸ್ತರಣಾ ನಿರ್ದೇಶಕರು ಹಾಗೂ ಸಂಶೋಧನಾ ನಿರ್ದೇಶಕರು ಸಮಗ್ರ ವಿವರಗಳನ್ನು ಸಿದ್ಧಪಡಿಸಿರುವುದಕ್ಕೆ ಮಂಡಳಿಯು ಅನುಮೋದನೆ ನೀಡಿತು. ಅಲ್ಲದೇ, ಡಾ. ರವಿ. ಎಂ.ವಿ., ಸಹಾಯಕ ಪ್ರಾಧ್ಯಾಪಕರು (ಮಣ್ಣು ವಿಜ್ಞಾನಿ) ಇವರು ಮಾನ್ಯ ಸದಸ್ಯರ ಪ್ರವಾಸದ ಸಂಯೋಜಕರಾಗಿ ನಾಮನಿರ್ದೇಶನ ಮಾಡಿರುವುದಕ್ಕೆ ಸಹ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು / ಪ್ರವಾಸದ ಸಂಯೋಜಕರು) |

| | |
|---|---|
| ಐಟಂ–3 | ರಾಯಚೂರು ಕೃವಿವಿ., ಹಣಕಾಸು ಸಮಿತಿಯ 13ನೇ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗೆ ಅನುಮೋದನೆ ನೀಡುವ ಕುರಿತು: |
| ಅ) | ರಾಯಚೂರು ಕೃವಿವಿ.,ಯ 2014–15, 2015–16 ಮತ್ತು 2016–17 ನೇ ಸಾಲಿನ ವಾರ್ಷಿಕ ಲೆಕ್ಕಪತ್ರ, ಲೆಕ್ಕ ಪರಿಶೋಧನಾ ವರದಿ ಹಾಗೂ ಕಂಡಿಕೆವಾರು ಅನುಸರಣಾ ವರದಿಯನ್ನು ಅನುಮೋದಿಸುವ ಕುರಿತು.<br><br>ಠರಾವು:<br>ಮಾನ್ಯ ವ್ಯವಸ್ಥಾಪನಾ ಮಂಡಳಿಯ ಗಮನಕ್ಕೆ ರಾಯಚೂರು ಕೃವಿವಿ.,ಯ 2014–15, 2015–16 ಮತ್ತು 2016–17 ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳು ಹಾಗೂ ಸದರಿ ಲೆಕ್ಕ ಪರಿಶೋಧನಾ ವರದಿಗಳ ಮೇಲೆ ಕಂಡಿಕೆವಾರು ಅನುಸರಣಾ ವರದಿಗಳನ್ನು ಕೃವಿವಿ., ಹಣಕಾಸು ಸಮಿತಿಯ 13ನೇ ಸಭೆಯಲ್ಲಿ ಚರ್ಚಿಸಿದಂತೆ ಸಭೆಯಲ್ಲಿ ಮಂಡಿಸಲಾಯಿತು. ವಿಸ್ತೃತ ಚರ್ಚೆಯ ನಂತರ, 2014–15, 2015–16 ಮತ್ತು 2016–17 ನೇ ಸಾಲಿನ ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳನ್ನು ಹಾಗೂ ಕಂಡಿಕೆವಾರು ಅನುಸರಣಾ ವರದಿಗಳನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದಿಸಿತು. ಲೆಕ್ಕ ಪರಿಶೋಧನಾ ವರದಿಗಳ ಮೇಲಿನ ಕಂಡಿಕೆವಾರು ಅನುಸರಣಾ ವರದಿಗಳ ಕುರಿತು ಚರ್ಚಿಸುತ್ತಾ, ಏಕರೂಪದ ವಸ್ತುಗಳನ್ನು ಖರೀದಿಸಲು ವಿವಿಧ ವಿಭಾಗಗಳಿಂದ ಬೇಡಿಕೆ ಬಂದಲ್ಲಿ, ಅದನ್ನು ಒಟ್ಟುಗೂಡಿಸಿ ಟೆಂಡರ್ ಕರೆಯುವಂತೆ ಸರಕಾರದ ಉಪ ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರು ಸಲಹೆ ನೀಡಿದರು.<br>(ಕ್ರಮ : ಹಣಕಾಸು ನಿಯಂತ್ರಣಾಧಿಕಾರಿಗಳು) |
| ಐಟಂ–4 | ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರಿನ 2017–18 ನೇ ಸಾಲಿನ ವಾರ್ಷಿಕ ವರದಿಯನ್ನು ಅನುಮೋದಿಸಿ, ಸರ್ಕಾರಕ್ಕೆ ಸಲ್ಲಿಸುವ ಕುರಿತು.<br><br>ವಾರ್ಷಿಕ ವರದಿಯನ್ನು ಪ್ರತಿವರ್ಷ ನಿಗದಿತ ಅವಧಿಯೊಳಗೆ ಸಲ್ಲಿಸಲು ಸರಕಾರದ ಉಪ–ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರು ಸಲಹೆ ನೀಡಿದರು. ಮಾನ್ಯ ನಾಮನಿರ್ದೇಶತ ಸದಸ್ಯರಾದ ಶ್ರೀ ಎಂ. ಶೇಖರಗೌಡ ಇವರು ಇನ್ನು ಮುಂದೆ ವಾರ್ಷಿಕ ವರದಿಯಲ್ಲಿ ಮಾನ್ಯ ವ್ಯವಸ್ಥಾಪನಾ ಮಂಡಳಿಯ ಚಟುವಟಿಕೆಗಳ ಕುರಿತು ಫೋಟೋಗಳೊಂದಿಗೆ ಸೇರಿಸಲು ತಿಳಿಯಪಡಿಸಿದರು.<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅಧಿನಿಯಮದ ಕಲಂ 57 ರಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, 2017–18ನೇ ಸಾಲಿನ ರಾಯಚೂರು ಕೃಷಿ ವಿಶ್ವವಿದ್ಯಾಲಯದ ವಾರ್ಷಿಕ ವರದಿಯನ್ನು ಅನುಮೋದಿಸಿತು.<br>(ಕ್ರಮ : ಕುಲಸಚಿವರು) |
| ಐಟಂ–5 | ಡಾ. (ಶ್ರೀಮತಿ) ಶಿಲ್ಪಾ ಉಪ್ಲಾಂವಕರ, ಸಹಾಯಕ ಗ್ರಂಥಪಾಲಕರು, ಕೃವಿವಿ ಗ್ರಂಥಾಲಯ, ಧಾರವಾಡ ಇವರಿಗೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕಲಬುರಗಿ ಮಹಾವಿದ್ಯಾಲಯಕ್ಕೆ ನಿಯೋಜಿಸುವ ವಿಷಯಕ್ಕೆ ಅನುಮೋದನೆ ಕುರಿತು.<br><br>ಠರಾವು:<br>ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಡಾ. (ಶ್ರೀಮತಿ) ಶಿಲ್ಪಾ ಉಪ್ಲಾಂವಕರ, ಸಹಾಯಕ ಗ್ರಂಥಪಾಲಕರು, ಕೃವಿವಿ ಗ್ರಂಥಾಲಯ, ಧಾರವಾಡ ಇವರಿಗೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕಲಬುರಗಿ ಮಹಾವಿದ್ಯಾಲಯಕ್ಕೆ ಮೂರು ವರ್ಷಗಳ ಅವಧಿಗಾಗಿ ಲೀನ್ ಆಧಾರದ ಮೇಲೆ ನಿಯೋಜಿಸುವ ವಿಷಯಕ್ಕೆ ಅನುಮೋದನೆ ನೀಡಿತು. ವ್ಯವಸ್ಥಾಪನಾ ಮಂಡಳಿಯ ಸಭೆಯ ನಡುವಳಿಗಳ ಸ್ಥಿರೀಕರಣಕ್ಕಾಗಿ ನಿರೀಕ್ಷಿಸದೇ, ವರ್ಗಾವಣೆ ಆದೇಶ ಹೊರಡಿಸಲು ಸಹ ಠರಾಯಿಸಲಾಯಿತು.<br>(ಕ್ರಮ : ಕುಲಸಚಿವರು) |

| | |
|---|---|
| ಐಟಂ–6 | ಕೃಷ್ಣಾ ಎಸ್. ಮರಡ್ಡಿ, ಸಹಾಯಕ ಗ್ರಂಥಪಾಲಕರು, ಕೃಮವಿ, ಕಲಬುರಗಿ, ಕೃವಿವಿ ರಾಯಚೂರು, ಇವರಿಗೆ ಕೃವಿವಿ ಗ್ರಂಥಾಲಯ, ಧಾರವಾಡಕ್ಕೆ ನಿಯೋಜಿಸುವ ವಿಷಯಕ್ಕೆ ಅನುಮೋದನೆ ಕುರಿತು.<br><br>ಠರಾವು:<br>ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಕೃಷ್ಣಾ ಎಸ್. ಮರಡ್ಡಿ, ಸಹಾಯಕ ಗ್ರಂಥಪಾಲಕರು, ಕೃಮವಿ, ಕಲಬುರಗಿ, ಕೃವಿವಿ ರಾಯಚೂರು, ಇವರಿಗೆ ಕೃವಿವಿ ಗ್ರಂಥಾಲಯ, ಧಾರವಾಡಕ್ಕೆ ಮೂರು ವರ್ಷಗಳ ಅವಧಿಗಾಗಿ ಲೀನ್ ಆಧಾರದ ಮೇಲೆ ನಿಯೋಜಿಸುವ ವಿಷಯಕ್ಕೆ ಅನುಮೋದನೆ ನೀಡುತ್ತಾ, ಸದರಿಯವರ ನಿಯೋಜನೆಯ ಪರಿಗಣನೆ ಕುರಿತು ಕೃವಿವಿ ಧಾರವಾಡದಿಂದ ಸಹಮತ ಪಡೆಯಲು ಸಲಹೆ ನೀಡಿತು.<br><br>(ಕ್ರಮ : ಕುಲಸಚಿವರು) |
| ಐಟಂ–7 | ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಸತಿ ನಿಲಯಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶೂನ್ಯ ಮೆಸ್ ಬಿಲ್ ಪ್ರಸ್ತಾವನೆಗೆ ಅನುಮೋದನೆ ಕುರಿತು.<br><br>ಠರಾವು:<br>ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಸತಿ ನಿಲಯಗಳಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ಮತ್ತು ವಸತಿ ಭತ್ಯೆ (ಇ.ಬಿ.ಎಲ್. ಚಾರ್ಜ್) (ರೂ. 1,200/– + ರೂ. 1,200/–) ರ ಬದಲಾಗಿ ಸಂಪೂರ್ಣ ವಾಸ್ತವಿಕ ಭೋಜನಾ ವೆಚ್ಚ ಮತ್ತು ವಸತಿ ಭತ್ಯೆಯನ್ನು ನೀಡುವಂತೆ ಅಂದರೆ ಶೂನ್ಯ ಮೆಸ್ ಬಿಲ್ ಪದ್ಧತಿಯನ್ನು ಅಳವಡಿಸಿಕೊಂಡು ಎಸ್.ಸಿ.ಎಸ್.ಪಿ.–ಟಿಎಸ್.ಪಿ. ಅನುದಾನದಿಂದ ವೆಚ್ಚವನ್ನು ಭರಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು. ಈ ಕುರಿತು ಮಂಡಳಿಯು ವಿವರಿಸುತ್ತಾ ಕೃವಿವಿ ಬೆಂಗಳೂರಿನಲ್ಲಿ ಚಾಲ್ತಿಯಲ್ಲಿರುವಂತೆ, ಒಟ್ಟು ಮೆಸ್ ಬಿಲ್‌ನಲ್ಲಿ ಭಾರತ ಸರಕಾರದ ಫೆಲೋಷಿಪ್ ಮೊತ್ತ ರೂ. 1,200/– ಇದ್ದು, ಉಳಿದ ಮೊತ್ತವನ್ನು ಎಸ್.ಸಿ.ಎಸ್.ಪಿ.–ಟಿಎಸ್.ಪಿ. ಅನುದಾನದಿಂದ ಉಪಯೋಗಿಸಿಕೊಳ್ಳಲಾಗುವುದು ಎಂದು ಸ್ಪಷ್ಟೀಕರಿಸಿತು.<br><br>(ಕ್ರಮ : ಡೀನ್(ವಿ.ಕ.)/ಹಣಕಾಸು ನಿಯಂತ್ರಣಾಧಿಕಾರಿ/ನೋಡಲ್ ಅಧಿಕಾರಿ–ಎಸ್.ಸಿ.ಎಸ್.ಪಿ/ಟಿ.ಎಸ್.ಪಿ.) |
| ಐಟಂ–8 | ಕೃವಿವಿ., ರಾಯಚೂರಿನಲ್ಲಿ ವಿಡಿಯೋ ಕಾನ್ಫರೆನ್ಸ ಸೌಲಭ್ಯವನ್ನು ಸ್ಥಾಪಿಸುವ ಕುರಿತು.<br><br>ಠರಾವು:<br>ದೀರ್ಘ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯು ಕೃಷಿ ವಿಶ್ವವಿದ್ಯಾಲಯ ರಾಯಚೂರಿನಲ್ಲಿ ನಾಲ್ಕು ಸ್ಥಳಗಳಲ್ಲಿ ಅಂದರೆ ವಿಶ್ವವಿದ್ಯಾಲಯದ ಆಡಳಿತ ಭವನ, ಕೃಷಿ ಮಹಾವಿದ್ಯಾಲಯ, ಭೀಮರಾಯನಗುಡಿ, ಕೃಷಿ ಮಹಾವಿದ್ಯಾಲಯ, ಕಲಬುರಗಿ ಹಾಗೂ ಕೃಷಿ ಸಂಶೋಧನಾ ಕೇಂದ್ರ ಹಗರಿಯಲ್ಲಿ ವಿದ್ಯಾರ್ಥಿ ಹಾಗೂ ಅಧ್ಯಾಪಕ ವರ್ಗದ ನಿರಂತರ ಸಂವಹನೆಗಾಗಿ ರೂ. 85.00 ಲಕ್ಷಗಳ ಅಂದಾಜಿನ ಮೊತ್ತದಲ್ಲಿ ಕಿಯೋನಿಕ್ಸ್ ವತಿಯಿಂದ ವಿಡಿಯೋ ಕಾನ್ಫರೆನ್ಸ ಸೌಲಭ್ಯವನ್ನು (1+2 ವರ್ಷಗಳ ಸೇವಾ ಸೌಲಭ್ಯದೊಂದಿಗೆ) ಸ್ಥಾಪಿಸುವ ಪ್ರಸ್ತಾವನೆಗೆ ಅನುಮೋದನೆ ನೀಡಿತು. ಮಾನ್ಯ ಸದಸ್ಯರುಗಳಾದ ಡಾ. ಎಂ. ಶೇಖರಗೌಡ ಹಾಗೂ ಶ್ರೀಮತಿ ಹೇಮಾವತಿ ಲಂಕೇಶ ಇವರುಗಳು ಮುಂದಿನ ಹಂತದಲ್ಲಿ ವಿಡಿಯೋ ಕಾನ್ಫರೆನ್ಸ ಸೌಲಭ್ಯವನ್ನು ಹೊಂದುವಂತೆ ಕ್ರಮವಿಡಲು ಒತ್ತಾಯಿಸಿದರು.<br>(ಕ್ರಮ : ಕುಲಸಚಿವರು / ಡಾ. ಎ. ಪ್ರಭುರಾಜ, ಪ್ರಾಧ್ಯಾಪಕರು) |

| | |
|---|---|
| ಐಟಂ–9 | ಕೃವಿವಿ., ರಾಯಚೂರಿನ ಆಡಳಿತ ಭವನದಲ್ಲಿಯ ಮಾಡ್ಯೂಲರ್ ಡಾಟಾ ಸೆಂಟರ್ (MDC) ಗೆ ಫೈರ್‌ವಾಲ್ ತಂತ್ರಾಂಶವನ್ನು ಅಳವಡಿಸಿಕೊಳ್ಳಲು ಅನುಮೋದನೆ ಕುರಿತು.<br><br>ಠರಾವು:<br>ಎನ್.ಕೆ.ಎನ್. (National Knowledge Network) ಅವರು ಒದಗಿಸಿರುವ ಅಂತರ್ಜಾಲದ ದುರ್ಬಳಕೆಯನ್ನು ತಡೆಯಲು ಅದಕ್ಕೆ ಅಗತ್ಯವಾದ ರಕ್ಷಣಾ ಕವಚವನ್ನು ಹೊಂದುವ ಸಲುವಾಗಿ, ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ಆಡಳಿತ ಭವನದಲ್ಲಿ ಅಸ್ತಿತ್ವದಲ್ಲಿರುವ ಮಾಡ್ಯೂಲರ್ ಡಾಟಾ ಸೆಂಟರ್ (MDC) ಗೆ ಫೈರ್‌ವಾಲ್ ತಂತ್ರಾಂಶವನ್ನು (FIREWALL FORTIGATE300E full bundle with 24x7 support for 1+2 years) ಕಿಯೋನಿಕ್ಸ್ ವತಿಯಿಂದ ಅಳವಡಿಸಿಕೊಳ್ಳುವ ರೂ. 16.00 ಲಕ್ಷಗಳ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು / ಡಾ. ಎ. ಪ್ರಭುರಾಜ, ಪ್ರಾಧ್ಯಾಪಕರು) |
| ಐಟಂ–10 | **ಕೃವಿವಿ., ರಾಯಚೂರಿನ ಗ್ರಂಥಾಲಯಗಳಲ್ಲಿ ಗ್ರಂಥಾಲಯ ನಿರ್ವಹಣಾ ತಂತ್ರಾಂಶ – ಕೋಹ ಮತ್ತು ಆರ್.ಎಫ್.ಐ.ಡಿ. ಸ್ಥಾಪಿಸುವ ಕುರಿತು.**<br><br>ಠರಾವು:<br>ವಿಸ್ತೃತ ಚರ್ಚೆಯ ನಂತರ ಮಾನ್ಯ ವ್ಯವಸ್ಥಾಪನಾ ಮಂಡಳಿಯು, ಕೃವಿವಿ., ರಾಯಚೂರಿನ ಮೂರು ಶೈಕ್ಷಣಿಕ ಆವರಣಗಳಲ್ಲಿಯ ಗ್ರಂಥಾಲಯಗಳಲ್ಲಿ ಪ್ರತಿಯೊಂದಕ್ಕೆ ರೂ. 24.30 ಲಕ್ಷಗಳಂತೆ ಒಟ್ಟು ರೂ. 72.90 ಲಕ್ಷಗಳ ಮೌಲ್ಯದ ಗ್ರಂಥಾಲಯ ನಿರ್ವಹಣಾ ತಂತ್ರಾಂಶ – ಕೋಹ ಸ್ಥಾಪಿಸಲು ಅನುಮೋದನೆ ನೀಡಿತು.<br><br>ಕೃವಿವಿ., ರಾಯಚೂರಿನ ಮೂರು ಶೈಕ್ಷಣಿಕ ಆವರಣಗಳಲ್ಲಿ ಅಂದರೆ ರಾಯಚೂರು, ಭೀಮರಾಯನಗುಡಿ ಹಾಗೂ ಕಲಬುರಗಿಯಲ್ಲಿ ಗ್ರಂಥಾಲಯಗಳಲ್ಲಿ ಪ್ರತಿಯೊಂದಕ್ಕೆ ರೂ. 42.73 ಲಕ್ಷಗಳಂತೆ ಒಟ್ಟು ರೂ. 128.19 ಲಕ್ಷಗಳ ಮೌಲ್ಯದ ಗ್ರಂಥಾಲಯ ಸುರಕ್ಷತಾ ನಿರ್ವಹಣಾ ತಂತ್ರಾಂಶ – ಆರ್.ಎಫ್.ಐ.ಡಿ. ಸ್ಥಾಪಿಸಲು ಸಹ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br>(ಕ್ರಮ : ಗ್ರಂಥಾಲಯಾಧಿಕಾರಿಗಳು) |
| ಐಟಂ–11 | **ವಿತ್ತೀಯ ಅಧಿಕಾರಗಳ ಪ್ರತ್ಯಾಯೋಜನೆಯ ಯಾದಿಯಲ್ಲಿ ಗ್ರಂಥಾಲಯದ ಅಂಶವನ್ನು ಸೇರಿಸಿ, ಸದರಿ ಅಂಶದ ವಿತ್ತೀಯ ಅಧಿಕಾರವನ್ನು ವಿಶ್ವವಿದ್ಯಾಲಯದ ಗ್ರಂಥಾಲಯಾಧಿಕಾರಿಯವರಿಗೆ ಪ್ರತ್ಯಾಯೋಜಿಸುವ ಕುರಿತು**<br><br>ಠರಾವು:<br>ಮಾನ್ಯ ವ್ಯವಸ್ಥಾಪನಾ ಮಂಡಳಿಯು, ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಗಳ ಅಧಿನಿಯಮ, 2009 ರ ಕಲಂ 24(vii) ರನ್ವಯ ಗ್ರಂಥಾಲಯಾಧಿಕಾರಿಯು ವಿಶ್ವವಿದ್ಯಾಲಯದ ಒಬ್ಬ ಅಧಿಕಾರಿಯಾಗಿದ್ದು, ಕೃವಿವಿಯ ದಿನಾಂಕ 12–10–2013 ರ ಆದೇಶದಲ್ಲಿ ಗ್ರಂಥಾಲಯದ ವಿತ್ತೀಯ ಅಧಿಕಾರಗಳ ಪ್ರತ್ಯಾಯೋಜನೆಯ ಯಾದಿಯಲ್ಲಿ ಗ್ರಂಥಾಲಯದ ಅಂಶವು ಸೇರ್ಪಡೆಯಾಗಿಲ್ಲದಿರುವುದರಿಂದ, ಗ್ರಂಥಾಲಯಾಧಿಕಾರಿಯವರಿಗೆ ಗ್ರಂಥಾಲಯದ ವಿತ್ತೀಯ ಅಧಿಕಾರಗಳ ಪ್ರತ್ಯಾಯೋಜನೆಯ ಅಧಿಕಾರ ಹಾಗೂ ಗ್ರಂಥಾಲಯದ ಅಂಶ (ಪುಸ್ತಕಗಳ / ಜರ್ನಲ್‌ಗಳು / ನಿಯತಕಾಲಿಕೆಗಳ ಖರೀದಿ) ವನ್ನು ಸೇರಿಸಲು ಅನುಮೋದನೆ ನೀಡಿತು.<br>(ಕ್ರಮ : ಕುಲಸಚಿವರು / ಗ್ರಂಥಾಲಯಾಧಿಕಾರಿಗಳು) |
| ಐಟಂ–12 | ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ ಜೆಸಿಬಿ ಯಂತ್ರವನ್ನು ಖರೀದಿಸಲು ಅನುಮೋದನೆ ನೀಡುವ ಕುರಿತು.<br><br>ಠರಾವು:<br>ದೀರ್ಘ ಚರ್ಚೆಯ ನಂತರ, ವಿಶ್ವವಿದ್ಯಾಲಯಕ್ಕೆ ಒಂದು ಹೊಸ ಜೆ.ಸಿ.ಬಿ. ಯಂತ್ರ (make JS120 Hydraulic Tracked Excavator with Livelink (JCB) (JCB make JS120 Hydraulic Tracked Excavator with Livelink) ಅನ್ನು GeM ಮೂಲಕ ಖರೀದಿಸುವ ರೂ. 45.00 ಲಕ್ಷಗಳ |

ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

(ಕ್ರಮ : ಸಂಶೋಧನಾ ನಿರ್ದೇಶಕರು/ಸರಕು ಖರೀದಿ ಅಧಿಕಾರಿ)

**ಐಟಂ–13** ರೂ 10.00 ಲಕ್ಷ ಮೌಲ್ಯವನ್ನು ಮೀರಿದ ಪ್ರಯೋಗಾಲಯದ ಪ್ರತಿ ಉಪಕರಣದ ಖರೀದಿಗೆ ಅನುಮೋದನೆ ನೀಡುವ ಕುರಿತು.

ಠರಾವು:

ಕೃಷಿ ವಿಶ್ವವಿದ್ಯಾಲಯದಲ್ಲಿಯ ಮಹಾವಿದ್ಯಾಲಯಗಳ ಹಾಗೂ ಕೃಷಿ ಸಂಶೋಧನಾ ಕೇಂದ್ರಗಳ ಕಾರ್ಯಕ್ಷಮತೆಯನ್ನು ವೃದ್ಧಿಸಲು ಈ ಕೆಳಕಂಡ ಉಪಕರಣಗಳ (ಪ್ರತಿ ಉಪಕರಣದ ಮೌಲ್ಯ ರೂ. 10.00 ಲಕ್ಷಕ್ಕೆ ಮೀರಿದ) ಅವಶ್ಯಕತೆ ಇದ್ದು, ಇವುಗಳ ಖರೀದಿಗೆ ವಿಶ್ವವಿದ್ಯಾಲಯದಲ್ಲಿ ಅನುದಾನ ಲಭ್ಯವಿರುವ ಹಿನ್ನೆಲೆಯಲ್ಲಿ ವ್ಯವಸ್ಥಾಪನಾ ಮಂಡಳಿಯು ಇವುಗಳನ್ನು ಖರೀದಿಸಲು ಅನುಮೋದಿಸಿತು :

| Sl. No. | Name of the item | Qty. | Amount (Rs.) |
|---|---|---|---|
| 1 | Fourier Transform-Infra Red (FT-IR) Spectroscopy | 1 | 40,00,000.00 |
| 2 | Electroantenograph system (EAD System) | 1 | 33,00,000.00 |
| 3 | Mahindra Scorpio | 1 | 16,00,000.00 |
| 4 | Multispectral Drone | 1 | 21,00,000.00 |
| 5 | Plant Growth Chamber or Environmental Chamber | 1 | 15,00,000.00 |
| 6 | CO2 Gas analyzer | 1 | 10,50,000.00 |
| 7 | Laptop | 46 | 20,70,000.00 |
| 8 | Mahindra - MARAZZO-M8 MODEL | 1 | 13,25,000.00 |
| 9 | State of art Millet Processing Unit | 3 | 1,50,00,000.00 |
| 10 | Colour Sorter | 1 | 25,00,000.00 |
| 11 | Mobile Processing Unit | 1 | 25,00,000.00 |
| | **Total** | | **3,69,45,000.00** |

(ಕ್ರಮ : ಸರಕು ಖರೀದಿ ಅಧಿಕಾರಿ)

**ಐಟಂ–14** ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಪ್ರಯೋಗಾಲಯ ಉಪಕರಣಗಳ ಖರೀದಿ ಪ್ರಕ್ರಿಯೆಯನ್ನು ಸ್ಥಿರೀಕರಿಸುವ ಕುರಿತು.

ಠರಾವು:

ವ್ಯವಸ್ಥಾಪನಾ ಮಂಡಳಿಯು ದಿನಾಂಕ 22–7–2017 ರಂದು ನಡೆದ ತನ್ನ 31ನೇ ಸಭೆಯಲ್ಲಿ Paddy Harvester Chain Trac (ರೂ. 28.00 ಲಕ್ಷ) ನ ಖರೀದಿಗೆ ಅನುಮೋದಿಸಿದ್ದು, ಆದರೆ, ಟೆಂಡರ್ ಪ್ರಕಟಿಸಿ, ಆರ್ಥಿಕ ಬಿಡ್‌ನ್ನು ತೆರೆಯಲಾಗಿ, ವಿಜ್ಞಾನಿಗಳು ಪ್ರಸ್ತಾಪಿಸಿದ್ದಕ್ಕಿಂತ ರೂ. 1.80 ಲಕ್ಷ ಹೆಚ್ಚಳವಾಗಿದ್ದು, ಇದರ ಖರೀದಿಗೆ ಮಾನ್ಯ ಮಂಡಳಿಯ ಅನುಸಮರ್ಥನೆಗೆ ಮಂಡಿಸಿದ್ದು, ಉಪಕರಣದ ಬೆಲೆ ಏರಿಕೆಯಿಂದಾಗಿ ಸದರಿ ಪ್ರಯೋಗಾಲಯದ ಉಪಕರಣವನ್ನು 31ನೇ ಸಭೆಯಲ್ಲಿ ಅನುಮೋದಿಸಿದ ದರಕ್ಕಿಂತ ಹೆಚ್ಚುವರಿ ದರದಲ್ಲಿ ಖರೀದಿಸಿದ್ದನ್ನು ಮಾನ್ಯ ಮಂಡಳಿಯು ಅನುಸಮರ್ಥಿಸಿತು.

(ಕ್ರಮ : ಸರಕು ಖರೀದಿ ಅಧಿಕಾರಿ)

**ಐಟಂ–15** ಕೃವಿವಿ., ರಾಯಚೂರಿನಲ್ಲಿ 2018–19 ನೇ ಸಾಲಿನಲ್ಲಿ ರೈತರ ಸಹಭಾಗಿತ್ವದ ಕಾರ್ಯಕ್ರಮದಡಿ ಬೀಜೋತ್ಪಾದನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಅವಶ್ಯವಿರುವ ಅನುದಾನಕ್ಕೆ ಅನುಮೋದನೆ ನೀಡುವ ಕುರಿತು.

ಠರಾವು:

ಕೃವಿವಿ., ರಾಯಚೂರಿನಲ್ಲಿ 2018–19 ನೇ ಸಾಲಿನಲ್ಲಿ ರೈತರ ಸಹಭಾಗಿತ್ವ ಯೋಜನೆಯಡಿ ಬೀಜೋತ್ಪಾದನಾ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಬೇಕಾದ ಹಣಕಾಸಿನ ವಿವರಗಳನ್ನು ಪರಿಗಣಿಸಿ, ಅವಶ್ಯವಿರುವ

| | |
|---|---|
| | ರೂ. 247.362 ಗಳ ಅನುದಾನಕ್ಕೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು : ಈ ಕೆಳಗಿನ ಯೋಜನೆಗಳ ಅನುಷ್ಠಾನಕ್ಕೆ ಅವಶ್ಯವಿರುವ<br>ಸದರಿ ಕಾರ್ಯಕ್ರಮದ ಅನುಷ್ಠಾನಕ್ಕಿಂತ ಪೂರ್ವದಲ್ಲಿ ರೈತ ಫಲಾನುಭವಿಗಳ ಯಾದಿಯನ್ನು ಮಾನ್ಯ ನಾಮನಿರ್ದೇಶಿತ ಸದಸ್ಯರುಗಳ ಅವಗಾಹನೆಗೆ ತರುವಂತೆ ಮಂಡಳಿಯು ಠರಾಯಿಸಿತು.<br>(ಕ್ರಮ : ವಿಶೇಷಾಧಿಕಾರಿ (ಬೀಜ)) |
| ಐಟಂ–16 | **ಕೃವಿವಿ., ಸಿಬ್ಬಂದಿಯವರ ರೂ. 25,000/– ಕ್ಕಿಂತ ಹೆಚ್ಚಿನ ಮೊತ್ತದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರುಪಾವತಿಗೆ ಅನುಮೋದನೆ ನೀಡುವ ಕುರಿತು.** |

ಠರಾವು:

ಈ ಕೆಳಕಂಡ ಸಿಬ್ಬಂದಿಯವರ ರೂ. 25,000/–ಕ್ಕಿಂತ ಹೆಚ್ಚಿನ ಮೊತ್ತದ ಮಾನ್ಯತೆ ಹೊಂದಿದ ಆಸ್ಪತ್ರೆಗಳಲ್ಲಿ ಪಡೆದ ವೈದ್ಯಕೀಯ ವೆಚ್ಚದ ಬಿಲ್ಲುಗಳ ಮರು ಪಾವತಿಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆ ನೀಡಿತು :

| ಕ್ರ. ಸಂ. | ಸಿಬ್ಬಂದಿಯ ಹೆಸರು / ಹುದ್ದೆ | ವೈದ್ಯಕೀಯ ವೆಚ್ಚ ಮರುಪಾವತಿಗಾಗಿ ಅನುಮೋದನೆ ನೀಡಿದ ಮೊತ್ತ (ರೂ) |
|---|---|---|
| 1 | ಶ್ರೀ. ಬಾಜಿರಾವ್,<br>ಸಹಾಯಕ ಕುಲಸಚಿವ, | 1,05,154/– |
| 2 | ಶ್ರೀಮತಿ ಅಂಜಲಾದೇವಿ, ಬೆರಳಚ್ಚುಗಾರರು,<br>ಕೃಸಂ.ಕೇಂದ್ರ, ಸಿರುಗುಪ್ಪ. | 58,159/– |
| 3 | ಡಾ. ಮಹಾಂತೇಶ, ಎಂ.ಟಿ.,<br>ಸಹಾಯಕ ಪ್ರಾಧ್ಯಾಪಕರು, ಕೆ.ವಿ.ಕೆ. ಗಂಗಾವತಿ | 1,03,039/– |

ಮುಂದುವರೆದು, ಈ ಕೆಳಕಂಡ ಸಿಬ್ಬಂದಿಯವರು ಸರಕಾರ / ಕೃವಿವಿ.,ದಿಂದ ಮಾನ್ಯತೆ ಪಡೆಯದ ಆಸ್ಪತ್ರೆಗಳಲ್ಲಿ ತುರ್ತು ಚಿಕಿತ್ಸೆ ಪಡೆದು ಸಲ್ಲಿಸಲಾದ ವೈದ್ಯಕೀಯ ವೆಚ್ಚದ ಬಿಲ್ಲುಗಳನ್ನು ಡಿ.ಹೆಚ್.ಓ.ರವರ ಮೇಲುರುಜುಗಾಗಿ ಕಳುಹಿಸಲು ಮತ್ತು ಮೇಲುರುಜುಗೊಂಡ ಮೊತ್ತದ ವೈದ್ಯಕೀಯ ವೆಚ್ಚವನ್ನು ಮರುಪಾವತಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ತನ್ನ ಅನುಮೋದನೆ ನೀಡಿತು :

| ಕ್ರ.. ಸಂ. | ಸಿಬ್ಬಂದಿಯವರ ವಿವರ | ಕ್ಲೇಮು ಮಾಡಿದ ವೈದ್ಯಕೀಯ ವೆಚ್ಚದ ಮೊತ್ತ (ರೂ.) |
|---|---|---|
| 1 | ಶ್ರೀ ಮಹೇಶ, ಕ್ಷೇತ್ರ ಸಹಾಯಕ, ರಾಯಚೂರು | 32,593/– |
| 2 | ಡಾ. ಮುಖೇಶಕುಮಾರ ಮಿನಾ,<br>ಸಹಾಯಕ ಪ್ರಾಧ್ಯಾಪಕರು, ರಾಯಚೂರು | 16,540/– |
| 3 | ಶ್ರೀ. ಕೃಷ್ಣಾ ಎಸ್. ಮರಡ್ಡಿ,<br>ಸಹಾಯಕ ಗ್ರಂಥಪಾಲಕರು, ಕಲಬುರಗಿ | 68,227/– |

(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿ)

| | |
|---|---|
| ಐಟಂ–17 | **ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿನ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಪ್ಲೋಮಾ ಕಾಲೇಜುಗಳಲ್ಲಿ ಹುದ್ದೆಗಳನ್ನು ಸೃಜಿಸುವ ಕುರಿತು** |

ಠರಾವು:

ಕೃವಿವಿ., ರಾಯಚೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಡಿಪ್ಲೋಮಾ ಕಾಲೇಜುಗಳಲ್ಲಿ ಈ ಕೆಳಗೆ ನಮೂದಿಸಿದ ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು ಹಾಗೂ ಡೀನ್ (ಸ್ನಾತಕೋತ್ತರ) ರವರ ಕಚೇರಿಯಲ್ಲಿ ಲಭ್ಯವಿರುವ ಪ್ರಾಧ್ಯಾಪಕರ ಒಂದು ಹುದ್ದೆಯನ್ನು ಡಿಪ್ಲೋಮ ಕೋರ್ಸ್‌ನ ಸಂಯೋಜಕರಿಗೆ ಮರುನಿಯೋಜಿಸಲು ಠರಾಯಿಸಲಾಯಿತು.

| ಕ್ರ.ಸಂ. | ಹುದ್ದೆ | ಸಂಖ್ಯೆ |
|---|---|---|
| | ಡೀನ್ (ಸ್ನಾತಕೊತ್ತರ), ಕಾರ್ಯಾಲಯ, ಕೃವಿವಿ., ರಾಯಚೂರು | |
| 1 | ಸಹ ಪ್ರಾಧ್ಯಾಪಕರು | 1 |
| 2 | ಸಹಾಯಕ ಪ್ರಾಧ್ಯಾಪಕರು | 1 |
| 3 | ಸಹಾಯಕ ಕುಲಸಚಿವರು | 1 |
| 4 | ಗಣಕಯಂತ್ರ ಸಹಾಯಕರು (ಕನ್ನಡ ಮತ್ತು ಆಂಗ್ಲ) | 1 |
| 5 | ಸುದ್ದಿ ವಾಹಕ | 1 |
| | ಡಿಪ್ಲೋಮಾ (ಕೃಷಿ ತಾಂತ್ರಿಕ), ಕೃಷಿ ತಾಂತ್ರಿಕ ಮಹಾವಿದ್ಯಾಲಯ, ರಾಯಚೂರು | |
| 1 | ಸಹ ಪ್ರಾಧ್ಯಾಪಕರು (ಪ್ರಾಚಾರ್ಯ) | 1 |
| 2 | ಸಹಾಯಕ ಪ್ರಾಧ್ಯಾಪಕರು | 1 |
| 3 | ಗಣಕಯಂತ್ರ ಸಹಾಯಕರು (ಕನ್ನಡ ಮತ್ತು ಆಂಗ್ಲ) | 1 |
| 4 | ನಿಲಯಪಾಲಕರು | 1 |
| | **ಡಿಪ್ಲೋಮಾ (ಕೃಷಿ), ಕೃಷಿ ಮಹಾವಿದ್ಯಾಲಯ, ಭೀ'ಗುಡಿ** | |
| 1 | ಸಹ ಪ್ರಾಧ್ಯಾಪಕರು (ಪ್ರಾಚಾರ್ಯ) | 1 |
| 2 | ಸಹಾಯಕ ಪ್ರಾಧ್ಯಾಪಕರು | 1 |
| 3 | ಗಣಕಯಂತ್ರ ಸಹಾಯಕರು (ಕನ್ನಡ ಮತ್ತು ಆಂಗ್ಲ) | 1 |
| 4 | ನಿಲಯಪಾಲಕರು | 1 |
| | **ಕೃಷಿ ಡಿಪ್ಲೋಮಾ ಕೇಂದ್ರ, ಕೃಸಂ.ಕೇ. ಹಗರಿ** | |
| 1 | ಸಹ ಪ್ರಾಧ್ಯಾಪಕರು (ಪ್ರಾಚಾರ್ಯ) | 1 |
| 2 | ಸಹಾಯಕ ಪ್ರಾಧ್ಯಾಪಕರು | 1 |
| 3 | ಗಣಕಯಂತ್ರ ಸಹಾಯಕರು (ಕನ್ನಡ ಮತ್ತು ಆಂಗ್ಲ) | 1 |
| 4 | ನಿಲಯಪಾಲಕರು | 1 |
| | **ಕೃಷಿ ಡಿಪ್ಲೋಮಾ ಕೇಂದ್ರ, ಕೆ.ವಿ.ಕೆ. ಬೀದರ** | |
| 1 | ಸಹ ಪ್ರಾಧ್ಯಾಪಕರು (ಪ್ರಾಚಾರ್ಯ) | 1 |
| 2 | ಸಹಾಯಕ ಪ್ರಾಧ್ಯಾಪಕರು | 1 |
| 3 | ಗಣಕಯಂತ್ರ ಸಹಾಯಕರು (ಕನ್ನಡ ಮತ್ತು ಆಂಗ್ಲ) | 1 |
| 4 | ನಿಲಯಪಾಲಕರು | 1 |

**(ಕ್ರಮ : ಡೀನ್ (ಸ್ನಾತಕೋತ್ತರ) ಕುಲಸಚಿವರು)**

**ಐಟಂ–18** **ಕೃಷಿ ಸಂಶೋಧನಾ ಕೇಂದ್ರ, ಧಡೇಸೂಗೂರುನಲ್ಲಿ ನೀರು ನಿರ್ವಹಣೆ ತಂತ್ರಜ್ಞಾನ ಕೇಂದ್ರದ ಸ್ಥಾಪನೆ ಕುರಿತು.**

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು, ಕೃಷಿ ಸಂಶೋಧನಾ ಕೇಂದ್ರ, ಧಡೇಸೂಗೂರುನಲ್ಲಿ ಈ ಕೆಳಕಂಡ ಹುದ್ದೆಗಳ ಮರುನಿಯೋಜನೆಯೊಂದಿಗೆ ನೀರು ನಿರ್ವಹಣೆ ತಂತ್ರಜ್ಞಾನ ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ನೀಡಿತು.

| ಕ್ರ.ಸಂ. | ಹುದ್ದೆ | ಸಂಖ್ಯೆ |
|---|---|---|
| | ಅ. ಬೋಧಕ ಸಿಬ್ಬಂದಿ | |
| 1 | ಪ್ರಾಧ್ಯಾಪಕರು (ಬೇಸಾಯಶಾಸ್ತ್ರ ಅಥಾವ ಕೃಷಿ ತಂತ್ರಜ್ಞಾನ) | 01 |
| 2 | ಸಹ ಪ್ರಾಧ್ಯಾಪಕರು (ಕೃಷಿ ತಂತ್ರಜ್ಞಾನ ಅಥಾವ ಬೇಸಾಯಶಾಸ್ತ್ರ) | 01 |

| | | |
|---|---|---|
| 3 | ಸಹಾಯಕ ಪ್ರಾಧ್ಯಾಪಕರು (ಸಸ್ಯ ಶರೀರ ಕ್ರಿಯಾ ಶಾಸ್ತ್ರ ಕೀಟಶಾಸ್ತ್ರ, ತೋಟಗಾರಿಕೆ) | 03 |
| | ಬ. ಬೋಧಕೇತರ ಸಿಬ್ಬಂದಿ | |
| 1 | ಕ್ಷೇತ್ರ ಸಹಾಯಕ | 01 |
| 2 | ಪ್ರಯೋಗಾಲಯ ಸಹಾಯಕ | 01 |
| 3 | ಸಹಾಯಕ | 01 |
| 4 | ಅಟೆಂಡರ್ | 01 |

(ಕ್ರಮ : ಕುಲಸಚಿವರು)

**ಐಟಂ–19** **ಬೀದರನಲ್ಲಿ ಸೋಯಅವರೆ ಸಂಶೋಧನಾ ಕೇಂದ್ರದ ಸ್ಥಾಪನೆ ಕುರಿತು.**

**ಠರಾವು:**

ಮಾನ್ಯ ವ್ಯವಸ್ಥಾಪನಾ ಮಂಡಳಿಯು, ಕೃಷಿ ಸಂಶೋಧನಾ ಕೇಂದ್ರ, ಬೀದರನಲ್ಲಿ ಈ ಕೆಳಕಂಡ ಹುದ್ದೆಗಳ ಮರುನಿಯೋಜನೆಯೊಂದಿಗೆ **ಸೋಯಅವರೆ ಸಂಶೋಧನಾ** ಕೇಂದ್ರವನ್ನು ಸ್ಥಾಪಿಸಲು ಅನುಮೋದನೆ ನೀಡಿತು ಹಾಗೂ ಮಾನ್ಯ ನಾಮನಿರ್ದೇಶಿತ ಸದಸ್ಯರಾದ ಡಾ. ಎಂ. ಶೇಖರಗೌಡ ಇವರ ಸಲಹೆಯಂತೆ ಸಹಾಯಕ ಪ್ರಾಧ್ಯಾಪಕ (ಬೀಜ ವಿಜ್ಞಾನ ಮತ್ತು ತಂತ್ರಜ್ಞಾನ) ರ ಒಂದು ಹುದ್ದೆಯನ್ನು ಸೇರಿಸಲು ಠರಾಯಿಸಲಾಯಿತು.

| ಕ್ರ.ಸಂ. | ಹುದ್ದೆ | ಸಂಖ್ಯೆ |
|---|---|---|
| | ಅ. ಬೋಧಕ ಸಿಬ್ಬಂದಿ | |
| 1 | ಸಹ ಪ್ರಾಧ್ಯಾಪಕರು (ತಳಿ ಅಭಿವೃದ್ಧಿ) | 01 |
| 2 | ಸಹಾಯಕ ಪ್ರಾಧ್ಯಾಪಕರು (ಬೇಸಾಯಶಾಸ್ತ್ರ / ಸಸ್ಯ ರೋಗ ಶಾಸ್ತ್ರ / ಆಹಾರ ಮೌಲ್ಯವರ್ಧನೆ \ ಬೀಜ ವಿಜ್ಞಾನ ತಂತ್ರಜ್ಞಾನ) | 04 |
| | ಬ. ಬೋಧಕೇತರ ಸಿಬ್ಬಂದಿ | |
| 1 | ಕ್ಷೇತ್ರ ಸಹಾಯಕ | 01 |
| 2 | ಸಹಾಯಕ | 01 |

(ಕ್ರಮ : ಸಂಶೋಧನಾ ನಿರ್ದೇಶಕರು / ಕುಲಸಚಿವರು)

**ಐಟಂ–20** **ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣಮಟ್ಟ ವಿಶ್ಲೇಷಣ ಪ್ರಯೋಗಾಲಯದಲ್ಲಿ ವಿಶ್ಲೇಷಕ ಹುದ್ದೆಯ ಸೃಷ್ಟಿ ಮಾಡುವ ಕುರಿತು.**

**ಠರಾವು:**

ಪೀಡೆನಾಶಕಗಳ ಅವಶೇಷ ಮತ್ತು ಆಹಾರ ಗುಣಮಟ್ಟ ವಿಶ್ಲೇಷಣ ಪ್ರಯೋಗಾಲಯವು ಎನ್.ಎ.ಬಿ.ಎಲ್. ನಿಂದ ಮಾನ್ಯತೆ ಪಡೆದಿರುವುದರಿಂದ ಹಾಗೂ ಆಹಾರ ಗುಣಮಟ್ಟವನ್ನು ವಿಶ್ಲೇಷಣೆ ಮಾಡುತ್ತಿರುವುದರಿಂದ, ಪ್ರಸ್ತುತವಿರುವ ತಾಂತ್ರಿಕ ಹುದ್ದೆಗಳಲ್ಲದೆ, ಇನ್ನೂ 08 ವಿಶ್ಲೇಷಕ ಹುದ್ದೆಗಳನ್ನು ಸೃಷ್ಟಿ ಮಾಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು. ವಿಶ್ಲೇಷಕ ಹುದ್ದೆಗೆ ಅವಶ್ಯಕವಿರುವ ವಿದ್ಯಾರ್ಹತೆ ವಿವರಗಳನ್ನು ಸಿ.ಎಫ್.ಟಿ.ಆರ್.ಐ. ಮೈಸೂರಿನಿಂದ ಪಡೆದು, ಸದರಿ ಹುದ್ದೆಗಳ ಸೃಜನೆಗಾಗಿ ಸೂಕ್ತ ಸಮರ್ಥನೆಗಳೊಂದಿಗೆ ಸರಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಮಂಡಳಿಯು ಸಲಹೆ ನೀಡಿತು.

(ಕ್ರಮ : ಕುಲಸಚಿವರು)

**ಐಟಂ–21** ಕೃಷಿ ವಿಶ್ವವಿದ್ಯಾಲಯ ರಾಯಚೂರಿನ ವಿವಿಧ ಆವರಣಗಳಲ್ಲಿ ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ಕುರಿತು.

ಠರಾವು:

ಮಂಡಳಿಯು ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ, ಟೆಂಡರ್ ಮಾಡಿದ ಸಿವಿಲ್ ಕಾಮಗಾರಿಯಾದ ಕೃಷಿ ಸಂಶೋಧನಾ ಕೇಂದ್ರ ಹಗರಿಯಲ್ಲಿ ಡೀಪ್ಲೋಮಾ ಕಾಲೇಜಿಗೆ ಹೋಗಲು ರಸ್ತೆ (WBM) ನಿರ್ಮಿಸುವ ಕಾಮಗಾರಿಯನ್ನು ಟೆಂಡರ್ ಮುಖಾಂತರ ಕರೆದು, ರೂ. 25.68 ಲಕ್ಷಗಳಿಗೆ ಕನಿಷ್ಟ ಬಿಡ್‌ದಾರರಿಗೆ ವಹಿಸಲು ತೀರ್ಮಾನಿಸಿತು.

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

**ಐಟಂ–22** ಹತ್ತು ಲಕ್ಷ ರೂಪಾಯಿಗಳಿಗೆ ಮೀರಿದ ಹೊಸ ಸಿವಿಲ್ ಕಾಮಗಾರಿಗಳನ್ನು ಕೈಗೊಳ್ಳಲು ಅನುಮೋದನೆ ನೀಡುವ ಕುರಿತು.

ಠರಾವು:

ರೂ. 10.00 ಲಕ್ಷ ಅಧಿಕದ ಈ ಕೆಳಕಂಡ ಹೊಸ ಸಿವಿಲ್ ಕಾಮಾಗಾರಿಗಳನ್ನು ವಿಶ್ವವಿದ್ಯಾಲಯದ ಮೂಲಭೂತ ಸೌಕರ್ಯಗಳ ಅವಶ್ಯಕತೆಯ ಹಿನ್ನೆಲೆಯಲ್ಲಿ ಕೃವಿವಿ., ರಾಯಚೂರಿನ ವಿವಿಧ ಆವರಣಗಳಲ್ಲಿ ಕೈಗೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು :

| ಕ್ರಮ. ಸಂ. | ಸಿವಿಲ್ ಕಾಮಗಾರಿಯ ವಿವರ | ಅಂದಾಜು ಬೆಲೆ (ರೂ. ಲಕ್ಷಗಳಲ್ಲಿ) | ಅನುದಾನ ವಿವರ |
|---|---|---|---|
| | **ಕೃಷಿ ಸಂಶೋಧನ ಕೇಂದ್ರ ಚಿತ್ತಾಪೂರ.** | | |
| 01 | ಕೃಷಿ ಸಂಶೋಧನ ಕೇಂದ್ರ ಚಿತ್ತಾಪೂರಿನಲ್ಲಿ ಕಛೇರಿ ಕಟ್ಟಡ ನಿರ್ಮಿಸುವ ಕೆಲಸ. | 76.20 | ಕೃ.ವಿ.ವಿ. ಅನುದಾನ (ಸಂಶೋಧನ) |
| | **ಭೀಮರಾಯನಗುಡಿ ಆವರಣ** | | |
| 02 | ಕೃಷಿ ಮಹಾವಿದ್ಯಾಲಯ ಭೀಮರಾಯನಗುಡಿಯ ಕಾಲೇಜ ಕಟ್ಟಡಕ್ಕೆ ಬಣ್ಣ ಹಚ್ಚುವುದು ಮತ್ತು ನವೀಕರಣ ಕೆಲಸ. | 23.25 | ಕೃ.ವಿ.ವಿ. ಅನುದಾನ (ಶಿಕ್ಷಣ) |
| | **ಮುಖ್ಯ ಆವರಣ ಮತ್ತು ಇತರೇ ಆವರಣ** | | |
| 03 | ರಾಯಚೂರು, ಕಲಬುರಗಿ ಮತ್ತು ಹಗರಿ ಆವರಣದಲ್ಲಿ ಅತ್ಯಾಧುನಿಕ ಗುಣಮಟ್ಟದ ಸಿರಿದಾನ್ಯ ಸಂಸ್ಕರಣಾ ಘಟಕಗಳಿಗೆ ಶೆಡ್ಗಳ ನಿರ್ಮಾಣದ ಕೆಲಸ (3 Nos each costing 41.02 lakhs) | 123.06 | ಆರ್.ಕೆ.ವಿ.ವೈ. ಅನುದಾನ |

(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು)

**ಐಟಂ–23** ಶ್ರೇಷ್ಠ ವಿಸ್ತರಣಾ ಕೇಂದ್ರ ಎಂದು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡುವುದು.

ಠರಾವು:

ಶ್ರೇಷ್ಠ ಕೃಷಿ ಸಂಶೋಧನಾ ಕೇಂದ್ರ ಎಂದು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡುವಂತೆ ವಿಸ್ತರಣಾ ಕೇಂದ್ರಗಳ ಕಾರ್ಯಕ್ಷಮತೆಯನ್ನು ಗುರುತಿಸಿ ಅತ್ಯುತ್ತಮ ಫಲಿತಾಂಶಗಳನ್ನು ಪ್ರದರ್ಶಿಸಿದ ಕೇಂದ್ರವನ್ನು ಶ್ರೇಷ್ಠ ವಿಸ್ತರಣಾ ಕೇಂದ್ರ ಎಂದು ಗುರುತಿಸಿ ಪ್ರಶಸ್ತಿ ಪ್ರದಾನ ಮಾಡುವ ಪ್ರಸ್ತಾವನೆಗೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.

ಕೊಪ್ಪಳ ಹಾಗೂ ಲಿಂಗಸೂಗೂರಿನ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳಿಗೆ ಅವಶ್ಯಕವಿರುವ ಸಿಬ್ಬಂದಿಯವರನ್ನು ಒದಗಿಸಲು ಮಾನ್ಯ ಸದಸ್ಯರಾದ ಡಾ. ಎಂ. ಶೇಖರಗೌಡ ಇವರು ಸಲಹೆ ನೀಡಿದರು.

(ಕ್ರಮ : ಸಂಶೋಧನಾ ನಿರ್ದೇಶಕರು / ಕುಲಸಚಿವರು)

| | |
|---|---|
| ಐಟಂ–24 | ಕೃಷಿ ವಿಜ್ಞಾನ ಕೇಂದ್ರ ಕವಡಿಮಟ್ಟಿ (ಯಾದಗಿರಿ ಜಿಲ್ಲೆ) ಯಲ್ಲಿ ಬಾನುಲಿ ಕೇಂದ್ರ ಸ್ಥಾಪನೆ ಕುರಿತು.<br><br>ಠರಾವು:<br>ವ್ಯವಸ್ಥಾಪನಾ ಮಂಡಳಿಯ 35ನೇ ಸಭೆಯ ಕಾರ್ಯಸೂಚಿ ಸಂ. 13 ರಲ್ಲಿ ವಿವರಿಸಿದಂತೆ ಕೃಷಿ ವಿಜ್ಞಾನ ಕೇಂದ್ರ ಕವಡಿಮಟ್ಟಿಯಲ್ಲಿ ಬಾನುಲಿ ಕೇಂದ್ರವನ್ನು ಸ್ಥಾಪಿಸುವ ಸಾಧ್ಯತೆಗಳ ಕುರಿತು ಸಲಹೆ ನೀಡುವ ಸಲುವಾಗಿ ಒಂದು ಸಮಿತಿಯನ್ನು ರಚಿಸಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಠರಾಯಿಸಿತು.<br><br>(ಕ್ರಮ : ವಿಸ್ತರಣಾ ನಿರ್ದೇಶಕರು / ಕುಲಸಚಿವರು) |
| ಐಟಂ–25 | ಶ್ರೇಷ್ಠ ರೈತರಿಗೆ ಕೃಷಿ ವಿಜ್ಞಾನ ಕೇಂದ್ರ ರಾಯಚೂರು ಗಳಿಸಿದ ಪ್ರಶಸ್ತಿ ಪರಿತೋಷಕದ ಠೇವಣಿಯಿಂದ ದೊರೆಯುವ ಹಣದಿಂದ ಚಿನ್ನದ ಪದಕವನ್ನು ವಿಶೇಷ ಸಾಧನೆಗೈದ ರೈತರಿಗೆ ನೀಡುವುದು.<br><br>ಠರಾವು:<br>ಶ್ರೇಷ್ಠ ರೈತರಿಗೆ ಕೃಷಿ ವಿಜ್ಞಾನ ಕೇಂದ್ರ ರಾಯಚೂರು ಗಳಿಸಿದ ಪ್ರಶಸ್ತಿ ಪರಿತೋಷಕದ ಠೇವಣಿಯಿಂದ ದೊರೆಯುವ ಹಣದಿಂದ ಚಿನ್ನದ ಪದಕವನ್ನು ವಿಶೇಷ ಸಾಧನೆಗೈದ ರೈತರಿಗೆ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆದಂದು ನೀಡಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>ಗಂಗಾವತಿ ಭಾಗದ ದಾನಿಗಳವರಿಂದ ಹಣವನ್ನು ಸಂಗ್ರಹಿಸಿ, ಕೃಷಿ ವಿಜ್ಞಾನ ಕೇಂದ್ರ ಗಂಗಾವತಿ ಹೆಸರಿನಲ್ಲಿ ಚಿನ್ನದ ಪದಕವನ್ನು ನೀಡುವಂತೆ ಮಾನ್ಯ ಸದಸ್ಯರಾದ ಡಾ. ಎಂ. ಶೇಖರಗೌಡ ಇವರು ಸಲಹೆ ನೀಡಿದರು. ಚಿನ್ನದ ಪದಕವನ್ನು ನೀಡಲು ಪ್ರಗತಿಪರ ರೈತರನ್ನು ಆಯ್ಕೆ ಮಾಡಲು ಸೂಕ್ತ ಮಾರ್ಗದರ್ಶಿಗಳನ್ನು ರೂಪಿಸಲು ಮಂಡಳಿಯು ಸಲಹೆ ನೀಡಿತು.<br><br>(ಕ್ರಮ : ವಿಸ್ತರಣಾ ನಿರ್ದೇಶಕರು / ಕುಲಸಚಿವರು) |
| ಐಟಂ–26 | ಸಿ.ಎ.ಎಸ್.–2006 ರಡಿಯಲ್ಲಿ ಪ್ರಾಧ್ಯಾಪಕದಿಂದ ಪ್ರಾಧ್ಯಾಪಕ(ಎಚ್.ಎ.ಜಿ.)ಯ ಮುಂಬಡ್ತಿ ನಿಯಮಾವಳಿಗಳನ್ನು ಮಾರ್ಪಡಿಸುವ ಕುರಿತು.<br><br>ಠರಾವು:<br>ಪ್ರಾಧ್ಯಾಪಕ (ಎಚ್ಎಜಿ) ಮುಂಬಡ್ತಿಯ ಸಿಎಎಸ್–2006 ರ ನಿಯಮಾವಳಿಯನ್ನು ಪ್ರಾಧ್ಯಾಪಕ (ಎಚ್ಎಜಿ) ಎಂದು ಮುಂಬಡ್ತಿ ನೀಡುವ ಉದ್ದೇಶಕ್ಕಾಗಿ ಪ್ರಾಧ್ಯಾಪಕರ ವೃಂದದ ಮಂಜೂರಾದ ಶೇ.10 ರಷ್ಟು ಹುದ್ದೆಗಳನ್ನು ಮೇಲ್ದರ್ಜೆಗೇರಿಸಿ ಎಂಬುದರ ಬದಲಾಗಿ ಕಾರ್ಯನಿರತ ಪ್ರಾಧ್ಯಾಪಕರ ಸಂಖ್ಯೆಯ ಶೇ.10 ರಷ್ಟು ಹುದ್ದೆಗಳನ್ನು ಮೇಲ್ದರ್ಜೆಗೇರಿಸಿ ಎಂದು ಮಾರ್ಪಾಡಿಗಾಗಿ ಪ್ರಸ್ತಾಪಿಸಲಾದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>(ಕ್ರಮ : ಕುಲಸಚಿವರು / ಹಣಕಾಸು ನಿಯಂತ್ರಣಾಧಿಕಾರಿ) |
| ಐಟಂ–27 | ಶ್ರೀ. ಚತ್ರು ಎಲ್. ರಾಥೋಡ್ ಇವರ ಸಹಾಯಕ ಪ್ರಾಧ್ಯಾಪಕ ಎಜಿಪಿ ರೂ.6000 ದಿಂದ ರೂ.7000 ಕ್ಕೆ ಮುಂಬಡ್ತಿ ಹೊಂದಿರುವ ಅರ್ಹತಾ ದಿನಾಂಕವನ್ನು ಮಾರ್ಪಾಡುಗೊಳಿಸಿ ಪರಿಗಣಿಸುವ ಕುರಿತು.<br><br>ಠರಾವು:<br>ಶ್ರೀ. ಚತ್ರು ಎಲ್. ರಾಥೋಡ್, ಸಹಾಯಕ ಪ್ರಾಧ್ಯಾಪಕರು ಇವರಿಗೆ ಎಜಿಪಿ ರೂ.6000 ದಿಂದ ರೂ.7000 ಕ್ಕೆ ಐದು ವರ್ಷಗಳ ಸೇವಾ ಅನುಭವವನ್ನು ಪರಿಗಣಿಸಿ ಈಗಾಗಲೇ ದಿನಾಂಕ: 5–4–2016 ರಂದು ನೀಡಲಾದ ಮುಂಬಡ್ತಿ ಆದೇಶವನ್ನು ಮಾರ್ಪಾಡು ಮಾಡಿ ದಿನಾಂಕ: 16.10.2011 ಬದಲಾಗಿ ದಿನಾಂಕ: 16.10.2010 ರಿಂದ ಅರ್ಹತಾ ದಿನಾಂಕವನ್ನು ಪರಿಗಣಿಸಿ ಮುಂಬಡ್ತಿ ನೀಡಲು ಪ್ರಸ್ತಾಪಿಸಲಾದಂತೆ ಮಾನ್ಯ ವ್ಯವಸ್ಥಾಪನಾ ಮಂಡಳಿಯು ಸರ್ವಾನುಮತದಿಂದ ಅನುಮೋದನೆ ನೀಡಿತು.<br><br>(ಕ್ರಮ : ಕುಲಸಚಿವರು) |

| | |
|---|---|
| ಐಟಂ–28 | ಸಹಾಯಕ ಪ್ರಾಧ್ಯಾಪಕ ವೃಂದದ ಒಂದು ಖಾಲಿ ಹುದ್ದೆಯನ್ನು ಸಹಾಯಕ ಪ್ರಾಧ್ಯಾಪಕ (ಕನ್ನಡ) ಎಂದು ಪರಿವರ್ತಿಸಲು ಅನುಮೋದನೆ ಕುರಿತು<br><br>ಠರಾವು:<br>ದೀರ್ಘ ಚರ್ಚೆಯ ನಂತರ, ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕ ವೃಂದದ ಖಾಲಿ ಹುದ್ದೆಯನ್ನು ಸಹಾಯಕ ಪ್ರಾಧ್ಯಾಪಕ (ಕನ್ನಡ) ಎಂದು ಪರಿವರ್ತಿಸುವ ಬದಲಾಗಿ ವಿಶ್ವವಿದ್ಯಾಲಯದ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಸಹಾಯಕ ಪ್ರಾಧ್ಯಾಪಕ (ಕನ್ನಡ) ರ ಎರಡು ಹುದ್ದೆಗಳ ಸೃಜನೆ ಮಾಡಲು ಮಂಡಳಿಯು ಠರಾಯಿಸಿತು.<br><br>ಮುಂದುವರೆದು, ಸಹಾಯಕ ಪ್ರಾಧ್ಯಾಪಕ (ಕನ್ನಡ) ರ ಹುದ್ದೆಗಳ ಸೃಜನೆಯ ಅವಶ್ಯಕತೆಗಳ ಕುರಿತು ಸೂಕ್ತ ಸಮರ್ಥನೆಗಳೊಂದಿಗೆ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪತ್ರ ಬರೆಯಲು ಮಂಡಳಿಯು ಸಲಹೆ ನೀಡಿತು.<br><br>(ಕ್ರಮ : ಕುಲಸಚಿವರು) |
| ಐಟಂ–29 | ವಲಯ ಕೃಷಿ ಸಂಶೋಧನಾ ಕೇಂದ್ರ ಕಲಬುರಗಿಯ ಕಾರ್ಯವ್ಯಾಪ್ತಿಯ ಬಗ್ಗೆ ನಿಲುವು ಸೂಚನೆ ಮತ್ತು ಕೇಂದ್ರಕ್ಕೆ ಸಿಬ್ಬಂದಿಯನ್ನು ಒದಗಿಸುವ ಕುರಿತು.<br><br>ಠರಾವು:<br>ಮಾನ್ಯ ವ್ಯವಸ್ಥಾಪನಾ ಮಂಡಳಿಯು ವಲಯ–1 ರ ಕ್ಷೇತ್ರದ ಭೌಗೋಳಿಕ ವ್ಯಾಪ್ತಿಯ ಕುರಿತು ಚರ್ಚಿಸಿ, ಸ್ಪಷ್ಟೀಕರಿಸುತ್ತಾ, ವಲಯ–1ಕ್ಕೆ ಕಲಬುರಗಿ ಮತ್ತು ಬೀದರ್ ಜಿಲ್ಲೆಗಳನ್ನೊಳಗೊಂಡು ಕಲಬುರಗಿಯಲ್ಲಿ ಒಂದು ಸಹ ಸಂಶೋಧನಾ ನಿರ್ದೇಶಕರ ಹುದ್ದೆಯನ್ನು ಹೊಂದಲು ಮಾನ್ಯ ವ್ಯವಸ್ಥಾಪನಾ ಮಂಡಳಿಯ 31ನೇ ಸಭೆಯಲ್ಲಿ ನಿರ್ಣಯಿಸಿರುವುದನ್ನು ಹಾಗೂ ಐ.ಸಿ.ಎ.ಆರ್. ಮತ್ತು ಕೃವಿವಿ ಕ್ಷೇತ್ರವನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾವಾರು ಕ್ಷೇತ್ರಗಳನ್ನು ಗಮನದಲ್ಲಿಟ್ಟುಕೊಂಡು ಕೃವಿವಿ ಆದೇಶ ಸಂ. ಕುಸ/ಕೃವಿವಿರಾ/ವ್ಯೆ.ಮಂ.ಸಭೆ–35/3248/2018–'19 ದಿನಾಂಕ 10–8–2018 ಅನ್ನು ಹೊರಡಿಸಿ ಬೀದರ್, ಕಲಬುರಗಿ, ಮತ್ತು ಯಾದಗಿರಿ ಜಿಲ್ಲೆಗಳನ್ನೊಳಗೊಂಡು ಒಂದು ಸಹ ಸಂಶೋಧನಾ ನಿರ್ದೇಶಕರ ಹುದ್ದೆಯನ್ನು ಹೊಂದುವಂತೆ ಬದಲಾವಣೆ ಮಾಡಿ ವಿಶ್ವವಿದ್ಯಾಲಯವು ಕ್ರಮಕೈಗೊಂಡಿರುವುದಕ್ಕೆ ಮಂಡಳಿಯು ಅನುಸಮರ್ಥನೆ ನೀಡಿತು. ಮುಂದುವರೆದು ವಲಯ ಸಂಶೋಧನಾ ಕೇಂದ್ರವನ್ನು ಬಲಪಡಿಸಲು ವಲಯ–1 ರ ಸಹ–ಸಂಶೋಧನಾ ಕೇಂದ್ರಕ್ಕೆ ಈ ಕೆಳಕಂಡ ಸಿಬ್ಬಂದಿಯವರನ್ನು ಮರುನಿಯೋಜಿಸಲು ಮಂಡಳಿಯು ಠರಾಯಿಸಿತು.<br><br>ಕ್ರ.ಸಂ. / ಹುದ್ದೆ / ಸಂಖ್ಯೆ:<br>1 – ತಾಂತ್ರಿಕ ಸಹಾಯಕರು – 01<br>2 – ಸೂಪರಿಂಟೆಂಡೆಂಟ್ – 01<br>3 – ಹಿರಿಯ ಸಹಾಯಕರು (ಸಾಮಾನ್ಯ) – 01<br>4 – ಟೈಪಿಸ್ಟ್ – ಗಣಕಯಂತ್ರ ನಿರ್ವಾಹಕ – 01<br>5 – ಸುದ್ದಿವಾಹಕ – 01<br><br>(ಕ್ರಮ : ಸಂಶೋಧನಾ ನಿರ್ದೇಶಕರು / ಕುಲಸಚಿವರು) |
| | ಹೆಚ್ಚುವರಿ ಕಾರ್ಯಸೂಚಿ ವಿಷಯಗಳು. |
| ಐಟಂ–1 | ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ಕೃಷಿ ಮೇಳದ ಮೈದಾನವನ್ನು ಬಾಡಿಗೆ ಆಧಾರದಲ್ಲಿ ನೀಡಲು ನಿಗದಿಪಡಿಸಿರುವ ಬಾಡಿಗೆ ದರಕ್ಕೆ ಸ್ಥಿರೀಕರಿಸುವ ಕುರಿತು.<br><br>ಠರಾವು:<br>ದೀರ್ಘ ಚರ್ಚೆಯ ನಂತರ, ಮಾನ್ಯ ವ್ಯವಸ್ಥಾಪನಾ ಮಂಡಳಿಯ 32ನೇ ಸಭೆಯಲ್ಲಿ, ಕೃಷಿಯೇತರ ಕಾರ್ಯಕ್ರಮಗಳಿಗೆ, ಮನರಂಜನಾ ಚಟುವಟಿಕೆಗಳಿಗೆ ಅಥವಾ ಕೃಷಿಯೇತರ ರ್‍ಯಾಲಿ ಕಾರ್ಯಕ್ರಮಗಳಿಗೆ ರಾಯಚೂರು ಕೃಷಿ ವಿಶ್ವವಿದ್ಯಾಲಯ ಆವರಣದ ಮೈದಾನ ಹಾಗೂ ಅದರ ಸುತ್ತಮುತ್ತಲಿನ ಪ್ರದೇಶವನ್ನು |

| | |
|---|---|
| | ನೀಡದಿರಲು ಠರಾಯಿಸಿರುವುದನ್ನು ಎತ್ತಿಹಿಡಿಯಿತು. ದಿನಾಂಕ 27-12-2018 ರ ಸುತ್ತೋಲೆಯನ್ನು ಹೊರಡಿಸಿ ಕೃಷಿ ಮೇಳದ ಮೈದಾನವನ್ನು ಬಾಡಿಗೆ ಆಧಾರದಲ್ಲಿ ನೀಡಲು ಬಾಡಿಗೆಯನ್ನು ನಿಗದಿಪಡಿಸಿ ಕೈಗೊಂಡಿರುವ ಕ್ರಮವನ್ನು ಮಂಡಳಿಯು ಅನುಸಮರ್ಥಿಸಿರುವುದಿಲ್ಲ. ಮುಂದುವರೆದು, ಸದರಿ ಮೈದಾನವನ್ನು ಸರಕಾರದ ಪ್ರಾಧಿಕಾರದವರು ಏರ್ಪಡಿಸುವ ಕಾರ್ಯಕ್ರಮಗಳಿಗೆ ಮಾತ್ರ ನೀಡಲು ಮಂಡಳಿಯು ಠರಾಯಿಸಿತು.<br>(ಕ್ರಮ : ಕುಲಸಚಿವರು / ಡೀನ್ (ವಿ.ಕ್ಷೇ.) |
| ಐಟಂ-2 | **ರಾಯಚೂರು, ಕಲಬುರಗಿ ಹಾಗೂ ಭೀಮರಾಯನಗುಡಿ ಆವರಣಗಳಲ್ಲಿ ಮೇಲ್ಛಾವಣಿ ಸೌರ ವಿದ್ಯುತ್ ಉತ್ಪಾದನೆ ಘಟಕಗಳನ್ನು ಸ್ಥಾಪಿಸಲು ಅನುಮೋದನೆ ಕುರಿತು.**<br><br>**ಠರಾವು:**<br>ಆಡಳಿತ ಭವನ ಹಾಗೂ ರಾಯಚೂರು, ಕಲಬುರಗಿ ಹಾಗೂ ಭೀಮರಾಯನಗುಡಿಯ ಎಲ್ಲಾ ಮಹಾವಿದ್ಯಾಲಯಗಳು ಮತ್ತು ಹಾಸ್ಟೆಲ್‌ಗಳ ಮೇಲ್ಛಾವಣಿಗೆ ರೂ. 275.00 ಲಕ್ಷಗಳ ಮೊತ್ತದ ಸೌರ ವಿದ್ಯುತ್ ಉತ್ಪಾದನೆ ಘಟಕಗಳನ್ನು ಟೆಂಡರ್ ಪದ್ಧತಿಯನ್ನು ಅನುಸರಿಸಿ ಸ್ಥಾಪಿಸುವ ಹೊಸ ಪ್ರಸ್ತಾವನೆಯನ್ನು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಪರಿಗಣಿಸಿ ಅನುಮೋದನೆ ನೀಡಿತು.<br>(ಕ್ರಮ : ಕಾರ್ಯನಿರ್ವಾಹಕ ಅಭಿಯಂತರರು) |
| ಐಟಂ-3 | **ಸಹಾಯಕ ಪ್ರಾಧ್ಯಾಪಕ (ಅನುವಂಶೀಯತೆ ಮತ್ತು ಸಸ್ಯ ತಳಿ ಅಭಿವೃದ್ಧಿ ಶಾಸ್ತ್ರ) ಹುದ್ದೆಗೆ ನೇಮಕಾತಿ ಕುರಿತು.**<br><br>ಶ್ರೀ ಹನುಮಂತ ನಾಯಕ್ ಇವರಿಗೆ ನೇಮಕಾತಿ ಆದೇಶ ನೀಡದೇ ಇದ್ದಲ್ಲಿ, ಸದರಿಯವರಿಗೆ ಅನ್ಯಾಯವಾಗುವುದೆಂದು ಮಾನ್ಯ ನಾಮನಿರ್ದೇಶಿತ ಸದಸ್ಯರುಗಳು ಸಭೆಗೆ ತಿಳಿಸಿದರು.<br><br>ಸರಕಾರದ ಉಪ-ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರು ನೇಮಕಾತಿ ಸಂಬಂಧ ಸ್ವೀಕೃತವಾದ ದೂರುಗಳ ಕುರಿತು ಪರಿಶೀಲಿಸಲು ಡಾ. ಎಂಎಸ್. ಶೀಲವಂತರ್ ರವರ ಅಧ್ಯಕ್ಷತೆಯಲ್ಲಿ ಸರಕಾರವು ರಚಿಸಿದ ಸಮಿತಿಯು ದೂರುಗಳನ್ನು ಪರಿಶೀಲಿಸುತ್ತಿದ್ದು, ಸದರಿ ಸಮಿತಿಯ ವರದಿ ಬಂದ ನಂತರ ಮಂಡಳಿಯು ಸೂಕ್ತ ನಿರ್ಣಯ ಕೈಗೊಳ್ಳುವಂತೆ ಸಲಹೆ ನೀಡಿದರು.<br><br>**ಠರಾವು:**<br>ಮಂಡಳಿಯು, ಡಾ. ಎಂ. ಎಸ್. ಶೀಲವಂತರ್ ರವರ ಸಮಿತಿಯ ವರದಿ ಸ್ವೀಕೃತವಾದ ನಂತರ, ಶ್ರೀ ಹನುಮಂತ ನಾಯಕ್ ಇವರಿಗೆ ನೇಮಕಾತಿ ಆದೇಶ ನೀಡುವ ಕ್ರಮಕ್ಕೈಗೊಳ್ಳಲು ಠರಾಯಿಸಿತು.<br>(ಕ್ರಮ : ಕುಲಸಚಿವರು) |
| ಐಟಂ-30 | **ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು** |
| 1. | ಸರಕಾರದಿಂದ ಸ್ಪಷ್ಟೀಕರಗಳನ್ನು ಪಡೆದು ಶಿಕ್ಷಕೇತರ ಸಿಬ್ಬಂದಿಯವರ ಪದೋನ್ನತಿಗಳನ್ನು ನೀಡಲು ಮಾನ್ಯ ನಾಮನಿರ್ದೇಶಿತ ಸದಸ್ಯರುಗಳು ಸಭೆಗೆ ತಿಳಿಸಿದರು.<br>ಸರಕಾರದ ಉಪ-ಕಾರ್ಯದರ್ಶಿಗಳು (ಕೃಷಿ ಇಲಾಖೆ) ಇವರು ಬಿ.ಕೆ. ಪವಿತ್ರ ಪ್ರಕರಣ ಇತ್ಯರ್ಥದಲ್ಲಿರುವ ಪ್ರಯುಕ್ತ, ಶಿಕ್ಷಕೇತರ ಸಿಬ್ಬಂದಿಯವರ ಪದೋನ್ನತಿಗಳನ್ನು ನೀಡದಿರಲು ನಿರ್ದೇಶನಗಳಿವೆಯೆಂದು ಸಭೆಯ ಗಮನಕ್ಕೆ ತಂದರು.<br><br>**ಠರಾವು :**<br><br>ಕೃವಿವಿ ರಾಯಚೂರಿನಲ್ಲಿ ಹಿಂಬಡ್ತಿ-ಮುಂಬಡ್ತಿ ಪ್ರಕರಣಗಳು ಇಲ್ಲದಿರುವುದರ ಬಗ್ಗೆ ಹಾಗೂ ಬಹಳಷ್ಟು ಸಿಬ್ಬಂದಿಯವರು ಮುಂಬಡ್ತಿಯಿಲ್ಲದೇ ನಿವೃತ್ತಿ ಹೊಂದುತ್ತಿರುವ ವಿಷಯವನ್ನು ನಮೂದಿಸಿ ಶಿಕ್ಷಕೇತರ ಸಿಬ್ಬಂದಿಯವರ ಪದೋನ್ನತಿ ಕುರಿತು ಡಿ.ಪಿ.ಎ.ಆರ್.ನಿಂದ ಸ್ಪಷ್ಟೀಕರಣ ಪಡೆಯಲು ಮಂಡಳಿಯು ಠರಾಯಿಸಿತು.<br><br>(ಕ್ರಮ : ಕುಲಸಚಿವರು) |

| | |
|---|---|
| 2. | ಚಿತ್ತಾಪುರ, ನಾಲವಾರ ಹಾಗೂ ದೇವದುರ್ಗ ಕ್ಷೇತ್ರಗಳಲ್ಲಿ ಕೃಷಿ ವಿಸ್ತರಣಾ ಚಟುವಟಿಕೆಗಳ ಅವಶ್ಯಕತೆಯನ್ನು ಗಮನಿಸಿ ಹೊಸದಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳನ್ನು ಅನುಕ್ರಮವಾಗಿ ಚಿತ್ತಾಪುರ / ನಾಲವಾರ ಹಾಗೂ ದೇವದುರ್ಗ ದಲ್ಲಿ ಸ್ಥಾಪಿಸಲು ಮಾನ್ಯ ಸದಸ್ಯರುಗಳಾದ ಶ್ರೀ ವೀರನಗೌಡ ಪರಸಾರೆಡ್ಡಿ ಹಾಗೂ ಶ್ರೀ ಅಮರೇಶ ಬಲ್ಲಿದವ ಅವರುಗಳು ಕೋರಿದರು.<br><br>**ಠರಾವು :**<br>ಚಿತ್ತಾಪುರ / ನಾಲವಾರ ಹಾಗೂ ದೇವದುರ್ಗ ದಲ್ಲಿ ಹೊಸದಾಗಿ ಕೃಷಿ ವಿಸ್ತರಣಾ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲು ವಿಸ್ತರಣಾ ನಿರ್ದೇಶಕರು, ಕೃವಿವಿ, ರಾಯಚೂರು ಇವರಿಂದ ವರದಿಯನ್ನು ಪಡೆಯಲು ಮಂಡಳಿಯು ಠರಾಯಿಸಿತು.<br><br>**(ಕ್ರಮ : ವಿಸ್ತರಣಾ ನಿರ್ದೇಶಕರು)** |
| 3. | ಮಾನ್ಯ ಸದಸ್ಯರಾದ ಶ್ರೀ ಅಮರೇಶ ಬಲ್ಲಿದವ ಅವರು ದೇವದುರ್ಗ ತಾಲೂಕಿನಲ್ಲಿ ಮೆಣಸಿನಕಾಯಿ ಬೇಸಾಯಕ್ಕೆ ಫಲವತ್ತತೆ ಇದ್ದು, ಈ ಕುರಿತು ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸುವಲ್ಲಿ ಕ್ರಮಕೈಗೊಳವುದಕ್ಕಾಗಿ ದೇವದುರ್ಗದಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಅವಶ್ಯಕತೆ ಇರುತ್ತದೆಯೆಂದು ಸಭೆಯ ಗಮನಕ್ಕೆ ತಂದರು.<br><br>**ಠರಾವು :**<br>ಮೆಣಸಿನಕಾಯಿ ಬೇಸಾಯದಲ್ಲಿ ಸಂಶೋಧನಾ ಚಟುವಟಿಕೆಗಳನ್ನು ಕೈಗೊಳ್ಳು ಸಲುವಾಗಿ ದೇವದುರ್ಗದಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವ ಸಂಬಂಧ ಸಂಶೋಧನಾ ನಿರ್ದೇಶಕರವರಿಂದ ವರದಿಯನ್ನು ಪಡೆಯಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಅನುಮೋದನೆ ನೀಡಿತು.<br><br>**(ಕ್ರಮ : ಸಂಶೋಧನಾ ನಿರ್ದೇಶಕರು)** |
| 4 | ಕಲಬುರಗಿಯ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ರಿಟ್ ಅರ್ಜಿಗಳು ಸಲ್ಲಿತವಾಗುತ್ತಿರುವ ಪ್ರಯುಕ್ತ, ಶ್ರೀ ಮಹಾಂತೇಶ ಪಾಟೀಲ್, ವಕೀಲರನ್ನು ಕೃವಿವಿ ರಾಯಚೂರಿನ ವಕೀಲರ ಯಾದಿಯಲ್ಲಿ ಸೇರ್ಪಡೆ ಮಾಡಿಕೊಳ್ಳಲು ಮಾನ್ಯ ಸದಸ್ಯರಾದ ಶ್ರೀ ಸಿದ್ದಪ್ಪ ಭಂಡಾರಿ ಇವರು ತಿಳಿಯಪಡಿಸಿದರು.<br><br>**ಠರಾವು :**<br>ಶ್ರೀ ಮಹಾಂತೇಶ ಪಾಟೀಲ್, ವಕೀಲರನ್ನು ಸಹ ಕೃವಿವಿ ರಾಯಚೂರಿನ ವಕೀಲರ ಯಾದಿಯಲ್ಲಿ ಸೇರ್ಪಡೆ ಮಾಡಿಕೊಳ್ಳಲು ಮಾನ್ಯ ವ್ಯವಸ್ಥಾಪನಾ ಮಂಡಳಿಯು ಠರಾಯಿಸಿತು.<br><br>**(ಕ್ರಮ : ಕುಲಸಚಿವರು)** |

ಸಭೆಯ ಅಧ್ಯಕ್ಷರಿಗೆ ಹಾಗೂ ಗೌರವಾನ್ವಿತ ಸದಸ್ಯರುಗಳಿಗೆ ಕುಲಸಚಿವರು ವಂದನೆ ಸಲ್ಲಿಸುವುದರೊಂದಿಗೆ ಸಭೆಯು ಮುಕ್ತಾಯಗೊಂಡಿತು.

| | |
|---|---|
| (ಕೆ.ಎನ್. ಕಟ್ಟಿಮನಿ)<br>ಕುಲಪತಿಗಳು ಹಾಗೂ ಅಧ್ಯಕ್ಷರು<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. | (ಎಂ.ಜಿ. ಪಾಟೀಲ)<br>ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ<br>ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು. |

(ಎಂ.ಜಿ. ಪಾಟೀಲ)
ಕುಲಸಚಿವರು ಹಾಗೂ ಸದಸ್ಯ–ಕಾರ್ಯದರ್ಶಿ
ವ್ಯವಸ್ಥಾಪನಾ ಮಂಡಳಿ, ಕೃವಿವಿ ರಾಯಚೂರು.

38